

ಕಲ್ಯಾಣ ಕಿರಣ

ಬಸವ ತತ್ವ ಪ್ರಸಾರದ ಮಾಸಪತ್ರಿಕೆ


ಸೆಪ್ಟಂಬರ್ 2012

ಬೆಲೆ-ರೂ.20/-









"ಮದಗಜದೊಲು ಮುನ್ನುಗ್ಗಿ ಬಸವ ಮಹಿಮೆ ಬೀರ್ದಿರಿ
ಬಸವನುಸಿರ ಪಸರಿಸುತ ಮರ್ತ್ಯಕ್ಕೆ ಬೆಳಕಾದಿರಿ"

ಪ್ರವಚನ ಪಿತಾಮಹ ಪೂಜ್ಯ ಶ್ರೀ
ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿ



ಅಸುಂಡಿಗ್ರಾಮದಲ್ಲಿ ದಿ.5-9-2012ರಂದು
ಪೂಜ್ಯಶ್ರೀ ಮಾತೆ ಸತ್ಯಾದೇವಿಯವರ ಪ್ರವಚನ ಸಮಾರೋಪ ಸಮಾರಂಭ



ಅಸುಂಡಿ ಗ್ರಾಮದ ಪ್ರಮುಖರು ಪೂಜ್ಯ ಶ್ರೀ ಮಾತಾಜಿಯವರನ್ನು ಸತ್ಕರಿಸುತ್ತಿರುವುದು



॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ-42 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-09 ಸೆಪ್ಟೆಂಬರ್-2012 ವಾರ್ಷಿಕ ಚಂದಾ 200 ರೂ.

ಕಲ್ಯಾಣದ ಕರೆ, ಕಲ್ಯಾಣಕೆ ಕರೆ

ಕಲ್ಯಾಣ ಕರೆದಿದೆ ಕಲ್ಯಾಣ ಗುರು ಬಸವಣ್ಣನ ಕಲ್ಯಾಣ
ಶರಣರಾಡಿದ ಕಲ್ಯಾಣ ವಿಶ್ವಕೆ ಬಯಸುತ ಕಲ್ಯಾಣ ॥ಪ॥

ಭಾರತ ಮಾತೆಯ ಮುಕುಟ ಕಾಶ್ಮೀರ, ಪಾವನ ಪಾದವು ಕನ್ಯಾಕುಮಾರಿ
ದೇಶ ವಿದೇಶದ ಮೂಲಗಳಿಂದ ಶರಣರ ಕರೆದಿದೆ ಕಲ್ಯಾಣ ॥ಅ.ಪ॥

ಗುರು ಬಸವಣ್ಣನ ಪ್ರಭೆಯನು ಬೆಳಗಲು ಪ್ರಣತೆಯಾಯಿತು ಕಲ್ಯಾಣ
ಸತ್ಯದ ಶೋಧಕ ಸಾಧಕರೆಲ್ಲರ ಅರಿವಿನ ನೆಲೆಯಾಯ್ತು ಕಲ್ಯಾಣ ॥1॥

ಕಾಯಕವೇ ಕೈಲಾಸವೆಂದು ಸಂದೇಶ ಸಾರಿದ ಕಲ್ಯಾಣ
ದಯವೇ ಧರ್ಮದ ಮೂಲವೆಂದು ಪ್ರೇಮವ ಮೆರೆದ ಕಲ್ಯಾಣ ॥2॥

ನಾಡ ಬಲ್ಲಿದರೆಲ್ಲ ಕೂಡಿದರಂದು ಸೂಡ ಕಟ್ಟಿದರು ವಚನಗಳ
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ ಸಮತೆಯ ಸಾರಿತು ಕಲ್ಯಾಣ ॥3॥

ಅಲ್ಲಮಪ್ರಭುದೇವ ಅಕ್ಕಮಹಾದೇವಿ ಚಿನ್ಮಯಜ್ಞಾನಿ ಚನ್ನಬಸವಣ್ಣ
ಸಿದ್ಧರಾಮೇಶ್ವರ ಮಡಿವಾಳ ಮಾಚಯ್ಯ ಮಹಾಮನೆ ಹೊಂದಿದ್ದ ಕಲ್ಯಾಣ ॥4॥

ಹರಳಯ್ಯ ಮಧುವಯ್ಯ ಮೋಳಿಗೆ ಮಾರಯ್ಯ ನೀಲಮ್ಮ ನಾಗಮ್ಮ ಶರಣೆಯರು
ಅಂಬಿಗರ ಚೌಡಯ್ಯ, ಮೇದಾರ ಕೇತಯ್ಯ, ಒಕ್ಕಲಿಗ ಮುದ್ದಣ್ಣನ ಕಲ್ಯಾಣ ॥5॥

ಅನುಭವ ಮಂಟಪ ರಚಿಸಿದರಂದು ಅನುಭಾವ ಗೀತೆಯ ಹಾಡಲಿಕೆಂದು
ವಚನ ಪುಷ್ಪಗಳ ಬಂಡನು ಸವಿಯಲು ಧಾವಿಸಿ ಬಂದಿತು ಶರಣರ ದಂಡು ॥6॥

ಬನ್ನಿರಿ ಶರಣರೆ ಬಸವ ಕಲ್ಯಾಣಕೆ ಬಸವ ಮಹಾಮನೆ ಕಟ್ಟುವ ಬನ್ನಿ
ತನುಮನಧನಗಳ ಧಾರೆಯನೆರೆದು ನವ ಕಲ್ಯಾಣವ ನಿರ್ಮಿಸ ಬನ್ನಿ ॥7॥

ಕಲ್ಯಾಣ ಪರ್ವದಿ ನಲಿಯುವ ಬನ್ನಿ ಕ್ರಾಂತಿಗೀತೆಯ ಹಾಡುವ ಬನ್ನಿ
ಶರಣರ ಋಣವನು ತೀರಿಸಬನ್ನಿ ಬಸವಾತ್ಮಜೆಯ ಬಿನ್ನಹವಿದುವು ॥8॥

-ಮಾತಾಜಿ

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಗುಂಟ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ.
ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಪ್ರಮಥ ಗಣಂಗಳು
ಶಿವಭಕ್ತರಿರ್ದ ಕ್ಷೇತ್ರ ಅವಿಮುಕ್ತಕ್ಷೇತ್ರವೆಂಬುದು ಹುಸಿಯೆ ?
ಶಿವಭಕ್ತರಿರ್ದ ದೇಶ ಪರಮ ಪಾವನವೆಂಬುದು ಹುಸಿಯೆ ?
ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಗುರು ಸಂಗನಬಸವಣ್ಣನ ಕಂಡು
ಬದುಕಿದೆ ಕಾಣಾ ಸಿದ್ಧರಾಮಯ್ಯ.

- ಅಲ್ಲಮ ಪ್ರಭುದೇವರ ವಚನ

ಕಿರಣ ಗನ್ನಡಿ

ಸೆಪ್ಟಂಬರ್-ಅಕ್ಟೋಬರ್ ತಿಂಗಳಿನಲ್ಲಿ ಬರುವ ಹಬ್ಬ ಹುಣ್ಣಿಮೆ ಉತ್ಸವಗಳು

ಸೆಪ್ಟಂಬರ್ 19 – ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳವರ 82ನೆಯ ಜನ್ಮ ದಿನೋತ್ಸವ

ಸೆಪ್ಟಂಬರ್ 19 – ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ

ಸೆಪ್ಟಂಬರ್ 19 – ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 54ನೆಯ ಜನ್ಮದಿನೋತ್ಸವ

ಅಕ್ಟೋಬರ್ 27,28,29 – ಬಸವ ಕಲ್ಯಾಣದಲ್ಲಿ ಹನ್ನೊಂದನೆಯ ಕಲ್ಯಾಣ ಪರ್ವ

ಅಕ್ಟೋಬರ್ 28, ಬೆಳಿಗ್ಗೆ 11 ಗಂಟೆಗೆ – 108 ಅಡಿ ಬಸವ ಪುತ್ಥಳಿಯ ಅನಾವರಣ

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com / basavamantap@gmail.com

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹನ್ನೊಂದನೆಯ

ಕಲ್ಯಾಣ ಪರ್ವ

2012ರ ಅಕ್ಟೋಬರ್ 27,28 ಮತ್ತು 29ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 25ನೆಯ ಶರಣ ಮೇಳವು ಇದೇ 2012ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು
ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯಿಂದಲೂ ಕಲ್ಯಾಣಪರ್ವ ಎಂಬ ವಾರ್ಷಿಕ ಉತ್ಸವವನ್ನು ನಡೆಸಲಾಗುತ್ತಿದೆ. 2012ನೆಯ ಇಸವಿಯಲ್ಲಿ 11ನೆಯ ಕಲ್ಯಾಣ ಪರ್ವವು ಜರುಗಲಿದ್ದು, ಆಶ್ವಯುಜ ಮಾಸದ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆ ಯಂದು ಅಕ್ಟೋಬರ್ 27,28 ಮತ್ತು 29ರಂದು ನಡೆಯಲಿದೆ.

ಶರಣ(ಶನಿ)ವಾರ ದಿ. 27ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆ ಮತ್ತು ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30ರಿಂದ 5-30ರವರೆಗೆ ಧಾರ್ಮಿಕ ರಸಪ್ರಶ್ನೆ ; ಸಂಜೆ -6-30ರಿಂದ ಚಿಂತನಗೋಷ್ಠಿ. ದಿ.28 ದೇವ(ಭಾನು) ವಾರದಂದು ಬೆಳಿಗ್ಗೆ 10-30ಕ್ಕೆ 108ಅಡಿ ಪುತ್ಥಳಿಯ ಉದ್ಘಾಟನೆ, ಮಧ್ಯಾಹ್ನ 3-30ರಿಂದ 5-30ರವರೆಗೆ ಆಶುಭಾಷಣ ಸ್ಪರ್ಧೆ, ಸಂಜೆ 6-30ರಿಂದ ಚಿಂತನಗೋಷ್ಠಿ, ದಿ.29 ಶಿವ(ಸೋಮ)ವಾರದಂದು ಅಕ್ಕನಾಗಲಾಂಬಿಕೆಯ ಪೌರ್ಣಮೆಯ ನಿಮಿತ್ತ ಬಸವ ಧರ್ಮ

ವಿಜಯೋತ್ಸವ ಕಾರ್ಯಕ್ರಮ, ಬಸವ ಭಾವಚಿತ್ರ ಮೆರವಣಿಗೆ ಶರಣರಿಂದ ಪಥ ಸಂಚಲನ, ನಂತರ ಅಲ್ಲಮಪ್ರಭು ಶೂನ್ಯಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಜರುಗಲಿವೆ.

108 ಅಡಿ ಬಸವ ಪುತ್ಥಳಿಯ ಅನಾವರಣ

ವಿಶ್ವಗುರು ಬಸವಣ್ಣನವರ ಕಾರಣಿಕೋತ್ಸವದ ದಿನ. 1-9-2004ರಂದು ನಾಂದಿ ಪೂಜೆಯೊಡನೆ 108ಅಡಿ ಪುತ್ಥಳಿಯ ನಿರ್ಮಾಣ ಕಾರ್ಯ ಆರಂಭವಾಯಿತು. ಅಂದಾಜು ವೆಚ್ಚ ಒಂದೂವರೆ ಕೋಟಿಯೊಡನೆ ಪ್ರಾರಂಭವಾದ ಪುತ್ಥಳಿ ನಿರ್ಮಾಣಕ್ಕೆ ಈಗಾಗಲೇ ಸುಮಾರು ನಾಲ್ಕು ಕೋಟಿ ವೆಚ್ಚವಾಗಿದೆ. ಅಂತಿಮ ಹಂತದ ಕೆಲಸ ನಡೆಯುತ್ತಿದ್ದು ಇನ್ನೂ ಅಪಾರ ಹಣದ ಅವಶ್ಯಕತೆ ಇದೆ. ಮೂರ್ತಿಯ ಉದ್ಘಾಟನೆ ಭಾನು(ದೇವ)ವಾರ ದಿ.28-10-2012ರಂದು ಬೆಳಿಗ್ಗೆ 11 ಗಂಟೆಗೆ ನೆರವೇರಲಿದೆ. ಇದೊಂದು ಐತಿಹಾಸಿಕ ಸನ್ನಿವೇಶವಾಗಿದ್ದು ಹೆಲಿಕಾಪ್ಟರಿನಿಂದ ಪುಷ್ಪವೃಷ್ಟಿ ನೆರವೇರಲಿದೆ. ಈ ಪವಿತ್ರ ಸೇವೆಯ ಕೈಂಕರ್ಯವನ್ನು ಬೀದರಿನ ರಾಜಕೀಯ ಧುರೀಣರಾದ ಶರಣ. ಸೂರ್ಯಕಾಂತ ಗುರುಪಾದಪ್ಪ ನಾಗಮಾರಪಳ್ಳಿ ವಹಿಸಿಕೊಂಡಿದ್ದಾರೆ. ಮಾತ್ರವಲ್ಲ, ನಡೆಯುವ ಬೃಹತ್ ದಾಸೋಹಕ್ಕೆ 75 ಕ್ವಿಂಟಾಲ್ ಅಕ್ಕಿಯನ್ನು ಕೊಡಿಸುವವರಿದ್ದು ಅಭಿನಂದನೆಗೆ ಪಾತ್ರರಾಗಿದ್ದಾರೆ. 108 ಅಡಿ ಪುತ್ಥಳಿಯ ಲೋಕಾರ್ಪಣ ಸಮಾರಂಭದಲ್ಲಿ ಹೆಚ್ಚಿನ ಜನ ಭಾಗಿಗಳಾಗಬೇಕೆಂದು ಕೋರುತ್ತೇವೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು; ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ಅಂಥ ಗಣಪರ್ವವನ್ನು ಇಂದು ನೀವು ನಾವು ಮಾಡಿ ತೋರಿಸಬೇಕಾಗಿದೆ. ಆಕ್ಟೋಬರ್ 26ರ ರಾತ್ರಿಯಿಂದ ಆಕ್ಟೋಬರ್ 30 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.ಶರಣ ಬಂಧುಗಳು ಒಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ಭರಿಸಲೂ ಅವಕಾಶ ಉಂಟು.

1. ಮಹಾಪೋಷಕರು	: 10000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	: 2000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	: 1000 ರೂ
5. ಸ್ವಾಗತ ಸಮಿತಿ ಸದಸ್ಯತ್ವ	: 500 ರೂ
6. ಪ್ರತಿನಿಧಿ ಶುಲ್ಕ	: 150 ರೂ.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21 -12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ.ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಕೆಳಗಿನಂತೆ ಅವಕಾಶವಿದೆ .

1. **ನಿತ್ಯ ಪೂಜಾ ನಿಧಿ :** ಶ್ರೀ ಗುರು ಬಸವಣ್ಣನವರ ಅರ್ಚನೆಗಾಗಿ ಪೂಜಾ ನಿಧಿ ಸಂಗ್ರಹ ; ದಾನಿಗಳ ಹೆಸರಿನಲ್ಲಿ ಪೂಜೆ-1000ರೂ.
2. **ದಾಸೋಹ ನಿಧಿ :** ದಾಸೋಹಿಗಳು ಕೊಡುವ ಹಣವನ್ನು ನಿಧಿಯಾಗಿ ಇಟ್ಟು ಅದರ ಬಡ್ಡಿಯ ಹಣದಿಂದ ನಿತ್ಯ ದಾಸೋಹ ಏರ್ಪಡಿಸುವುದು. 1500 ರೂ.
3. **ಬಸವ ಮಂಟಪ ನಿರ್ಮಾಣ :** ಸಾಮೂಹಿಕ ಪ್ರಾರ್ಥನೆಗಾಗಿ ಬಸವ ಮಂಟಪ, ಭವ್ಯವಾದ ಪ್ರಾರ್ಥನಾ ಮಂದಿರ ಕಟ್ಟುವುದು.
   "ಬಸವ ಮಂಟಪ " ನಿರ್ಮಾಣಕ್ಕೆ 10,000 ರೂ. ಮತ್ತು ಮೇಲೆ ದೇಣಿಗೆ ಕೊಟ್ಟವರ ಹೆಸರನ್ನು ನಾಮಫಲಕದಲ್ಲಿ ಬರೆಸಲಾಗುವುದು.
4. **ಬಸವ ಧ್ಯಾನ ಮಂಟಪ :** ಬಸವ ಕಲ್ಯಾಣದಲ್ಲಿ ಲಭ್ಯವಿರುವ ಲಾಟರೈಟ್ ಶಿಲಾಪದರ ಬಳಸಿಕೊಂಡು ಗವಿಯನ್ನು ಕೆತ್ತಿಸುವುದು.
5. **ಶರಣ ಧಾಮ :** ಬರುವ ಯಾತ್ರಿಕರಿಗಾಗಿ ಉಳಿಯಲು ವಸತಿ ಗೃಹವನ್ನು ನಿರ್ಮಾಣ ಮಾಡುವುದು. ಸಿಂಗಲ್ ಕೋಣೆ ನಿರ್ಮಾಣಕ್ಕೆ 1,00,000 (ಒಂದು ಲಕ್ಷ) ರೂ. ಡಬ್ಬಲ್ ಕೋಣೆ ನಿರ್ಮಾಣಕ್ಕೆ 1,50,000 (ಒಂದೂವರೆ ಲಕ್ಷ)ರೂ.ದಂತೆ ದಾನಿಗಳಿಂದ ಪಡೆಯಲಾಗುವುದು. ಒಂದು ಬಸ್ ಜನ ಉಳಿಯುವಂತೆ ಸಾಮೂಹಿಕ ವಸತಿ ಗೃಹ (dormitory) ಕಟ್ಟಿಸಲು 2,00,000 (ಎರಡು ಲಕ್ಷ)ರೂ.ಗಳು.
6. **108 ಅಡಿ ಎತ್ತರದ ಬಸವಣ್ಣನವರ ಬೃಹತ್ ಪುತ್ಥಳಿ ನಿರ್ಮಾಣ :** ಅಂದಾಜು ವೆಚ್ಚ 4ಕೋಟಿ ರೂಪಾಯಿಗಳು. ರೂ. 11,000 ಮತ್ತು ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನಲ್ಲಿ ಬರೆಸಲಾಗುವುದು. ರೂ. 25,000(ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನಲ್ಲಿ ಸಾಮೂಹಿಕವಾಗಿ ಕೆತ್ತಿಸಲಾಗುವುದು. ರೂ. 50,000 (ಐವತ್ತು ಸಾವಿರ)ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದು. ಒಂದು

ಲಕ್ಷ ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದಲ್ಲದೆ ಅವರ ಭಾವಚಿತ್ರವನ್ನು ಹಾಕಲಾಗುವುದು. 2004ರ ಸೆಪ್ಟಂಬರ್ 1 ರಂದು ಬೃಹತ್ ಬಸವ ಪುತ್ಥಳಿಯ ನಿರ್ಮಾಣಕ್ಕೆ ನಾಂದಿ ಪೂಜೆ ನೆರವೇರಿಸಲಾಗಿದೆ. ಈಗ ಮೂರ್ತಿಯ ಕೆಲಸವು 90%ಭಾಗ ಪೂರೈಸಿದೆ ಎಂದು ತಿಳಿಸಲು ಹೆಮ್ಮೆ ಎನಿಸುತ್ತಿದೆ. ಕೆಲಸವು ತ್ವರಿತಗತಿಯಲ್ಲಿ ಸಾಗಿರುವುದರಿಂದ ಹಣದ ಆವಶ್ಯಕತೆ ಬಹಳಷ್ಟಿದೆ.

7. **108 ಸೋಪಾನದ ಯೋಜನೆ :** ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಮುಂಭಾಗದಲ್ಲಿ ಏರಲು, ಇಳಿಯಲು ಮೆಟ್ಟಿಲನ್ನು ಮಾಡಲಾಗುತ್ತಿದೆ. ಏರಲು 108 ಇಳಿಯಲು 108 ಹೀಗೆ ಒಟ್ಟು 216 ಸೋಪಾನಗಳಾಗುತ್ತವೆ. ಅಳತೆ 10 ಅಡಿ ಉದ್ದ, 8 ಅಂಗುಲ ಎತ್ತರ, 1 ಅಡಿ ಅಗಲ - ಈ ಮೆಟ್ಟಿಲುಗಳಿಗೆ ಗ್ರಾನೈಟನ್ನು ಹಾಕಿಸುವ ಅಪೇಕ್ಷೆ ಇದೆ. 8 ಅಂಗುಲ ಎತ್ತರದ ಕಲ್ಲಿನ ಮೇಲೆ ದಾನಿಗಳ ಹೆಸರನ್ನು ಕೆತ್ತಿಸಲಾಗುವುದು. ಈ ಸೋಪಾನ ಯೋಜನೆಗೆ ಒಂದು ಮೆಟ್ಟಲಿಗೆ 15000 (ಹದಿನೈದು ಸಾವಿರ) ಕೊಟ್ಟರೆ ಧನ ದಾಸೋಹಿಗಳ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು. ಶರಣ ಬಂಧುಗಳು ಸ್ವಯಂ ಪ್ರೇರಣೆಯಿಂದ ದೇಣಿಗೆ ನೀಡಲು ಮುಂದಾಗಬೇಕೆಂದು ಕೋರುತ್ತೇವೆ.

8. **ಜೀವನ ಚರಿತ್ರೆಯ ಚಿತ್ರಣ :** ಗುರು ಬಸವ ಮೂರ್ತಿಯ ಕೆಳಗಿನ ಪೀಠದಲ್ಲಿ 24 ಅಡಿ ಎತ್ತರದ ಎರಡು ಅಂತಸ್ತಿನ ಕಟ್ಟಡವಿದ್ದು ಅದರಲ್ಲಿ ಗುರು ಬಸವಣ್ಣನವರ ಸಮಗ್ರ ಜೀವನದ ಪರಿಚಯ ಮಾಡಿಕೊಡಲಾಗುವುದು. ಅವರ ಜೀವನದ 32 ಪ್ರಸಂಗಗಳನ್ನು ಆಯ್ಕೆ ಮಾಡಿದ್ದು ಅವುಗಳ 3ಡಿ ಚಿತ್ರಣ ಮಾಡಲಾಗುವುದು. ಒಂದೊಂದು ಚಿತ್ರಣಕ್ಕೆ ಒಂದೂವರೆ ಲಕ್ಷ ರೂ.ಗಳ ವೆಚ್ಚವಾಗುತ್ತಿದ್ದು ಕೊಡುವ ಧನ ದಾಸೋಹಿಗಳ ಹೆಸರಿನ ನಾಮಫಲಕ ಹಾಕಿ, ಅವರ ಭಾವ ಚಿತ್ರವನ್ನು ಆ ಚಿತ್ರದ ಕೋಣೆಯ ಮುಂಭಾಗದಲ್ಲಿ ಪ್ರದರ್ಶಿಸಲಾಗುವುದು. ಈಗಾಗಲೇ ಆರೇಳು ದಾನಿಗಳು ಕೊಟ್ಟಿದ್ದು ಇನ್ನೂ ಬಹಳಷ್ಟಕ್ಕೆ ಅವಕಾಶವಿದೆ. ಆದ್ದರಿಂದ ಈ ಅಪರೂಪದ ಕೊಡುಗೆಗೆ ಮುಂದಾಗಬೇಕೆಂದು ಸೂಚಿಸುತ್ತೇವೆ.

9. **ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ನೆನಪಿಸುವಂತೆ ಒಂದು ಬೃಹತ್ ಸ್ಮಾರಕ ರಚನೆ ಇತ್ಯಾದಿ.** ಜನರ ನೆರವು ಸಿಕ್ಕಿದಂತೆ ಇನ್ನೂ ಹಲವಾರು ಯೋಜನೆಗಳನ್ನು ಹಾಕಲಾಗುವುದು. ಈಗಾಗಲೇ ಕೊಳವೆ ಭಾವಿ ಮತ್ತು ತೆರೆದ ಭಾವಿ ತೋಡಿಸಲಾಗಿದೆ. ನೀರಿನ ಟ್ಯಾಂಕ್‌ಗಳು, ಕಾರ್ಯಾಲಯ ಕಟ್ಟಡ , ಬಸವಾಲಯ ಪೂರ್ಣಗೊಂಡಿವೆ. ಆದ್ದರಿಂದ ಸಹೃದಯರು ಆದಷ್ಟು ಬೇಗನೆ ಉದಾರವಾಗಿ ಕಾಣಿಕೆಯನ್ನು ಸಲ್ಲಿಸಿ ಕೆಲಸವು ತ್ವರಿತಗತಿಯಲ್ಲಿ ಸಾಗುವಂತೆ ಪ್ರೋತ್ಸಾಹಿಸಬೇಕೆಂದ್ದು ಕೋರುತ್ತೇವೆ. ಶರಣ ಬಂಧುಗಳೇ, ನಿಮ್ಮ ಗಳಿಕೆಯ ಒಂದು ಪಾಲನ್ನು ಗುರು-ಲಿಂಗ-ಜಂಗಮದ ದಾಸೋಹಕ್ಕೆ ಸಲ್ಲಿಸುವುದು ನಿಮ್ಮ ಆದ್ಯ ಕರ್ತವ್ಯವೆಂದು ತಿಳಿದು ಉದಾರವಾಗಿ ಕಾಣಿಕೆ ಸಲ್ಲಿಸಿರಿ. ಬಸವ ಧರ್ಮ ಪೀಠದ ಧ್ಯೇಯೋದ್ದೇಶ ಪೂರೈಕೆಗೆ ನೀವು ಸಲ್ಲಿಸುವ ಕಾಣಿಕೆಯನ್ನು ಕೆಳಗಿನೆರಡು ವಿಳಾಸಗಳಲ್ಲಿ ಯಾವ ವಿಳಾಸಕ್ಕೂ ಕಳಿಸಬಹುದು.

ಸಂಪರ್ಕಿಸುವ ವಿಳಾಸಗಳು

ಇನ್‌ಕಮ್ ಟ್ಯಾಕ್ಸದಲ್ಲಿ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ.

ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035
20ನೆಯ ಮುಖ್ಯರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎:080-22923736/9663385657

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 08481-252856/9448732456

ಕಲ್ಯಾಣ ಕಿರಣದ ಓದುಗರಿಗೆ
ಕಳಕಳಿಯ ಸೂಚನೆ

ಕಲ್ಯಾಣ ಕಿರಣ ಮಾಸಪತ್ರಿಕೆಯು ದಿ.14-1-1970ರಂದು ಪ್ರಾರಂಭವಾಯಿತು. ಅಂದಿನಿಂದ ಇಂದಿನವರೆಗೆ ಅವ್ಯಾಹತವಾಗಿ ನಡೆದು ಬಂದಿದೆ. ಲಾಭದ ದೃಷ್ಟಿಯಿಂದ ನಡೆಸದೆ ಧರ್ಮ ಪ್ರಚಾರ ದೃಷ್ಟಿಯಿಂದ ನಡೆಸುತ್ತಾ ಬಂದೆವು. ಆರಂಭದಲ್ಲಿ ವಾರ್ಷಿಕ ಚಂದಾ 10 ರೂ, ಆಜೀವ ಸದಸ್ಯತ್ವ 100 ರೂ. ಇತ್ತು. 100 ರೂ.ದಿಂದ 40 ವರ್ಷಗಳಲ್ಲಿ 1000ರೂ. ವರೆಗೆ ಆಜೀವ ಸದಸ್ಯತ್ವ ಏರಿತು. 100 ರೂ. ಕೊಟ್ಟವರಿಗೂ 42 ವರ್ಷ ಕಲ್ಯಾಣ ಕಿರಣ ಮಾಸ ಪತ್ರಿಕೆ ಕಳಿಸಿದೆವು. ಓದುಗರ ಸಂಖ್ಯೆ ಏರಿತಾದರೂ ನಷ್ಟವೂ ಏರಿತು. ಬೆಂಗಳೂರು ರಾಷ್ಟ್ರೀಯ ಬಸವ ದಳದ ಪ್ರಮುಖರು ಸಭೆ ಸೇರಿ ಆಜೀವ ಸದಸ್ಯತ್ವದ ಪರಿಕಲ್ಪನೆ ಈ ಬೆಲೆ ಏರಿಕೆಯ ಕಾಲದಲ್ಲಿ ಸೂಕ್ತವಲ್ಲ ಎಂದು ನಿರ್ಧರಿಸಿದ್ದೇ ಅಲ್ಲದೆ ಹಿಂದೆ ಆಜೀವ ಸದಸ್ಯರಾಗಿ ಎಂದೋ ಆದವರು ಈಗ ನವೀಕರಿಸಬೇಕು ಎಂದು, ನವೀಕರಿಸಿದವರಿಗೆ ಮಾತ್ರ ಕಲ್ಯಾಣ ಕಿರಣ ಕಳಿಸಬೇಕು ಎಂಬ ನಿರ್ಣಯ ಕೈಕೊಂಡರು. ವಾರ್ಷಿಕ ಚಂದಾ 200 ರೂ. ಐದು ವರ್ಷದ ಚಂದಾ 1000ರೂ ಅಂತ ಮಾಡಿ ಆಜೀವ ಸದಸ್ಯತ್ವ ಪಡೆಯುವುದನ್ನು ನಿಲ್ಲಿಸಲಾಯಿತು. ಈ ನಿರ್ಣಯ ಕೈಕೊಂಡ ಬಳಿಕ ಹಳೆಯ ಆಜೀವ ಸದಸ್ಯರಿಗೆ ಪತ್ರಿಕೆ ನಿಲ್ಲಿಸುವುದಾಗಿಯೂ, ಅವರು ನವೀಕರಿಸಬೇಕೆಂದು ಸತತವಾಗಿ 3 ತಿಂಗಳು ಕಲ್ಯಾಣ ಕಿರಣದಲ್ಲಿ ಸೂಚನೆ ನೀಡಿ ಜೂನ್ 2012ರ ಸಂಚಿಕೆಯಿಂದ ಕಲ್ಯಾಣ ಕಿರಣ ಕಳಿಸುವುದನ್ನು ನಿಲ್ಲಿಸಲಾಯಿತು. ಅನೇಕರು ಫೋನ್ ಮಾಡಿ, ಭೇಟಿಯಾದಾಗ ಜೂನ್‌ದಿಂದ ಸಂಚಿಕೆ ತಮಗೆ ಬಂದಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ಇದರರ್ಥ ಅವರು ಸೂಚನೆಯನ್ನು ಪತ್ರಿಕೆಯಲ್ಲಿ ಓದಿಲ್ಲ ಎಂದಾಗುತ್ತದೆ.

ಬಹಳಷ್ಟು ಜನರಿಗೆ ಚಂದಾ ಹಣವನ್ನು ಹೇಗೆ ಕಳಿಸಬೇಕು ಎಂಬುದೇ ತಿಳಿಯದು. ಚೆಕ್, ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್, NEFT ಮನಿ ಟ್ರಾನ್ಸಫರ್- ಹೀಗೆ ಅನೇಕ ಅವಕಾಶಗಳುಂಟು.

ಸೆಪ್ಟಂಬರ್ ಸಂಚಿಕೆ

ಸೆಪ್ಟೆಂಬರ್ ಸಂಚಿಕೆಯನ್ನು ಹಳೆಯ ಆಜೀವ ಸದಸ್ಯರಿಗೆ, ಓದುಗರಿಗೆ ಈ ಸಲ ಉಚಿತವಾಗಿ ಕಳಿಸಲಾಗಿದೆ. 11ನೆಯ ಕಲ್ಯಾಣ ಪರ್ವವು 2012ರ ಅಕ್ಟೋಬರ್ 27,28 ಮತ್ತು 29 ರಂದು ಶರಣ ಭೂಮಿ ಬಸವ ಕಲ್ಯಾಣದಲ್ಲಿ ಜರುಗಲಿದ್ದು ದಿ.28-10-2012ರಂದು 108 ಅಡಿ ಎತ್ತರದ ಬಸವ ಪುತ್ಥಳಿಯ ಉದ್ಘಾಟನೆಯು. ನೆರವೇರಲಿದೆ. ಅಭಿಮಾನಿಗಳ ಸಂಖ್ಯೆ ಅಗಾಧವಾಗಿದ್ದು ಎಲ್ಲರಿಗೂ ಪ್ರತ್ಯೇಕವಾಗಿ ಆಮಂತ್ರಣ ಕಳಿಸಲು ಸಾಧ್ಯವಾಗದು. ಅದಕ್ಕಾಗಿ ಇದನ್ನೇ ಆಹ್ವಾನವೆಂದು ಶರಣ ಬಂಧುಗಳು ತಿಳಿಯಲೆಂದು ಪತ್ರಿಕೆಯನ್ನು ಕಳಿಸಲಾಗಿದೆ. ಅನೇಕರು ವಸತಿಯ ಬಗ್ಗೆ ಚಿಂತಿತರಾಗಿದ್ದಾರೆ. ಇರುವ ಕೆಲವೇ ಕೆಲವು ಲಾಡ್ಜಿಂಗ್ ಆಗಲೇ ಭರ್ತಿಯಾಗಿವೆ. ನಾವು ಶರಣ ಮೇಳದಂತೆ ಶಾಮಿಯಾನಾ ಟೆಂಟ್‌ದ ಕೊಠಡಿ ಮಾಡುವುದಲ್ಲದೆ ಮಳೆಯ ಸಂಭವವನ್ನು ಊಹಿಸಿ ತಗಡಿನ ಮೇಲ್ಛಾವಣಿ ಹೊಂದಿರುವ ಕೊಠಡಿಗಳನ್ನು ಮಾಡಲಾಗುವುದು. ಮತ್ತಷ್ಟು ಶೌಚಾಲಯ, ಸ್ನಾನ ಗ್ರಹಗಳನ್ನು ನಿರ್ಮಿಸಲಾಗುವುದು. ಆದ್ದರಿಂದ ಬಸವ ಮಹಾಮನೆಯ ಆವರಣದಲ್ಲೇ ಉಳಿಯಲು ಅನುಕೂಲವಾಗುವುದು.

ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಪಾಲ್ಗೊಳ್ಳುವುದಲ್ಲದೆ ಉದಾರವಾಗಿ ಕಲ್ಯಾಣ ಪರ್ವಕ್ಕೆ ಧನ ಸಹಾಯ ಮಾಡಬೇಕಾಗಿ ಕೋರುತ್ತೇವೆ.

ಕಲ್ಯಾಣ ಕಿರಣದ ಚಂದಾ ಹಣವನ್ನು ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಬ್ಯಾಂಕ್ ಡ್ರಾಫ್ಟ್, ಚೆಕ್, ಎಂ.ಓ. ಮೂಲಕ ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ಕಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ
ಕೂಡಲ ಸಂಗಮ-ಬಸವಕಲ್ಯಾಣ

Bank of India, Rajaji nagar branch, Bangalore. A/c No. 840610100016409
IFS Code: BKID0008406

ಬಸವ ವಚನಾಮೃತ

- ಮಾತಾಜಿ

991. ಜಂಗಮ ಭಕ್ತ ಸಂಬಂಧ

ಕಬ್ಬಿನ ಮೇಲೆ ಜೇನಿಟ್ಟಿತ್ತೆಂಬರು,
ಅವು ಒಂದರ ಸಿಹಿಯನೊಂದರಿಯವು
ಭಕ್ತ ಜಂಗಮದ ನಡುವೆ ಅರ್ಥ ಪ್ರಾಣ ಅಭಿಮಾನವೆಂಬ ಸಿಗುರು
ಕಾಡಿತ್ತು ಕಾಣಾ, ಲಿಂಗದೇವಾ. –ಬವದೀ. 994

ಬೆಳೆದು ನಿಂತ ಕಬ್ಬಿನ ಜಲ್ಲೆಯ ಮೇಲೆ ಜೇನು ಗೂಡನ್ನು ಕಟ್ಟುತ್ತದೆ ಎಂದುಕೊಳ್ಳುವಾ. ಕಬ್ಬೂ ಸಿಹಿ, ಜೇನೂ ಸಿಹಿ, ಆದರೆ ಅವು ಒಂದರ ಸಿಹಿಯನ್ನು ಮತ್ತೊಂದು ಅರಿಯವು. ಏಕೆಂದರೆ ಎರಡರ ಮಧ್ಯೆ ಸಿಗುರು (ಸಿಬುರು, ಕಬ್ಬಿನ ಸಿಪ್ಪೆ)ಇರುತ್ತದೆ. ಅದೇ ರೀತಿ ಭಕ್ತ ಮತ್ತು ಜಂಗಮದ ಸಂಬಂಧ. ಭಕ್ತರೂ ಒಳ್ಳೆಯವರೆ, ಜಂಗಮನೂ ಒಳ್ಳೆಯವನೆ ಆದರೆ ಇಬ್ಬರ ಮಧ್ಯೆ ಸಾಮರಸ್ಯವಿಲ್ಲ. ಏನು ಕಾರಣ. ಅರ್ಥವಾಗಲಿ, ಪ್ರಾಣವಾಗಲಿ, ಅಭಿಮಾನವಾಗಲಿ ಮಧ್ಯೆ ಅಡ್ಡ ಬಂದಿದೆ. ಹೇಗೆಂದರೆ ಜಂಗಮವನ್ನು ಭೇಟಿಯಾದರೆ ಎಲ್ಲಿ ಕಾಣಿಕೆ ಕೊಡಬೇಕಾಗುವುದೋ ಎಂಬ ಲೋಭ. ತತ್ತ್ವನಿಷ್ಠರಾದ ಗುರುವಾಗಿ ಯಾವುದಾದರೂ ಒಂದು ತತ್ತ್ವಕ್ಕೆ ಬದ್ಧರಾಗಿ ಹೋರಾಡುತ್ತಿದ್ದರೆ ಆ ಹೋರಾಟದಲ್ಲಿ ಭಾಗಿಯಾದರೆ ಪ್ರಾಣಕ್ಕೆ ಎಲ್ಲಿ ಕುತ್ತು ಬರುವುದೋ ಎಂಬ ಜೀವಭಯ. ತಾನು ದೊಡ್ಡ ಮನುಷ್ಯ, ತಾನಾಗಿ ಹೋಗಿ ಜಂಗಮದ ದರ್ಶನ ಪಡೆದರೆ ತನ್ನ ಸ್ಥಾನಕ್ಕೆ ಪ್ರತಿಷ್ಠೆಗೆ ಎಲ್ಲಿ ಕುಂದು ಬರುವುದೋ ಎಂಬ ಅಭಿಮಾನ. ಇವು ಜಂಗಮದಿಂದ ಭಕ್ತನನ್ನು ದೂರವಿಡುವುವು. ಈ ಅಡ್ಡಿಗಳನ್ನು ದೂರ ಮಾಡಿಕೊಂಡು ಭಕ್ತನು ಜಂಗಮದ ಭಕ್ತಿ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಅರ್ಥ-ಪ್ರಾಣ-ಅಭಿಮಾನಗಳನ್ನು ಗುರುಲಿಂಗ ಜಂಗಮಕ್ಕೆ ಅರ್ಪಿಸಿ ಬಿಡಬೇಕು.

992. ಮಾಡಿದೆನೆಂಬ ಅಹಂಕಾರ ಸಲ್ಲದು

ತನುವ ಕೊಟ್ಟೆನೆಂದು ನುಡಿದು, ಗುರುವಚನಕ್ಕೆ ದೂರವಾದೆ
ಮನವ ಕೊಟ್ಟೆನೆಂದು ನುಡಿದು, ಲಿಂಗಮುಖಕ್ಕೆ ದೂರವಾದೆ
ಧನವ ಕೊಟ್ಟೆನೆಂದು ನುಡಿದು, ಜಂಗಮ ಮುಖಕ್ಕೆ ದೂರವಾದೆ
ಲಿಂಗದೇವಯ್ಯಾ
ನಿಮಗೆ ಮಾಡಿದೆನೆಂದು ನುಡಿದು ಕೆಟ್ಟ ಕೇಡಿಂಗೆ ಕಡೆಯಿಲ್ಲ. –ಬವದೀ. 995

ಕೆಲವರು ತನುಮನಧನದಿಂದ ಅಥವಾ ಯಾವುದಾದರೊಂದು ಅಂಗದಿಂದ ಸೇವೆ ಮಾಡಿ, 'ಮಾಡಿದೆ' ಎಂಬ ಅಹಂಕಾರದಿಂದ ಬೀಗುವುದುಂಟು. ಏಕೆ ಈ ಅಹಂಕಾರ ? ವ್ಯಕ್ತಿ ಸೇವೆ ಮಾಡುವುದು ಇನ್ನೊಬ್ಬರ ಉಪಕಾರಕ್ಕಾಗಿ ಅಲ್ಲ, ತನ್ನ ಉದ್ಧಾರಕ್ಕೆ ! ಪುಣ್ಯವನ್ನು ಗಳಿಸಿಕೊಳ್ಳಲಿಕ್ಕೆ. ಸೇವೆ ಮಾಡುವ ಅವಕಾಶವನ್ನು ಇನ್ನೊಬ್ಬರು ಒದಗಿಸಿ ಕೊಡದಿದ್ದರೆ ಸೇವೆ ಮಾಡಲು ಎಂತು ಸಾಧ್ಯ ? ತನುವಿನಿಂದ ಗುರುಲಿಂಗಜಂಗಮದ ಸೇವೆ ಮಾಡಿ ಅದನ್ನು ಕೊಚ್ಚಿಕೊಂಡರೆ ವ್ಯಕ್ತಿಯು ಗುರು ಕೃಪೆಯಿಂದ ದೂರವಾಗುವನು. ಲಿಂಗದೇವನ ಅನುಗ್ರಹಕ್ಕೆ ಹೊರತಾಗುವನು, ಜಂಗಮದ ಕರುಣೆಯಿಂದ ವಂಚಿತನಾಗುವನು. ಮನುಷ್ಯನಾಗಿ ಹುಟ್ಟಿದ ಮೇಲೆ ಸೃಷ್ಟಿಕರ್ತ ಲಿಂಗದೇವನಿಗೆ ಕೃತಜ್ಞರಾಗಿದ್ದುಕೊಂಡು ಗುರು-ಲಿಂಗ-ಜಂಗಮದ ಸೇವೆ ಮಾಡುವುದು ಆದ್ಯ ಕರ್ತವ್ಯ : ಮಾಡದೆ ಇರುವುದು ದ್ರೋಹ ; ಮಾಡಿ ಕೊಚ್ಚಿಕೊಳ್ಳುವುದು ಅಜ್ಞಾನಯುಕ್ತ ಅಹಂಕಾರ ಇದು ಮನುಷ್ಯನ ಅವನತಿಗೆ ಕಾರಣವಾಗುತ್ತದೆ.

993. ಇದಿರುತ್ತರ ಬೇಡ

ತ್ರಿವಿಧವನಿತ್ತು, ರೂಹು ಮಾತು ಬಳಿಕುಂಟೆ ಅಯ್ಯಾ ?
ತನುವ ಕೊಡನಾಗಿ ಇದಿರುತ್ತರವಿದೆ,
ಮನವ ಕೊಡನಾಗಿ ಆನೆಂಬಹಂಕಾರವಿದೆ,
ಧನವ ಕೊಡನಾಗಿ ಪ್ರಪಂಚಿನ ಬಳಕೆಯಿದೆ
ಲಿಂಗದೇವಯ್ಯಾ, ಎಂತು ಭಕ್ತನಪ್ಪನು ? –ಬವದೀ. 996

ಗುರು-ಲಿಂಗ-ಜಂಗಮಕ್ಕೆ ತನು-ಮನ-ಧನ ಕೊಡುವುದೇ ತ್ರಿವಿಧ ದಾಸೋಹ. ಕೊಟ್ಟ ಮೇಲೆ ಕೆಲವೊಂದು ನಿಯಮ, ಶಿಷ್ಟಾಚಾರಗಳನ್ನು ರೂಪಿಸಿಕೊಳ್ಳಬೇಕು. ಗುರು-ಜಂಗಮಕ್ಕೆ ಎದುರು ನಿಂತು ವಾದಿಸಬಾರದು. ಹಾಗೆ ಮಾಡುತ್ತಾರೆ ಎಂದರೆ ತನುವನ್ನು ಕೊಟ್ಟಿಲ್ಲ ಎಂದು ಅರ್ಥ. ಅಹಂಕಾರದಿಂದ ಗುರು-ಜಂಗಮರ ಎದುರು ವರ್ತಿಸಬಾರದು, ಉದ್ಧಟತನದಿಂದ ನಿಲ್ಲಬಾರದು. ಹಾಗೆ ಮಾಡಿದರೆ ಮನಸ್ಸನ್ನು ಕೊಟ್ಟಿಲ್ಲ ಎಂದು ಅರ್ಥ. ಗಳಿಸಿದ ಹಣ ಬರಿ ಲೌಕಿಕ ಕೆಲಸಗಳಿಗೆ, ಸಂಸಾರಕ್ಕೆ ಬಳಕೆಯಾಗುತ್ತಿದ್ದರೆ ಧನವನ್ನು ಕೊಟ್ಟಿಲ್ಲ ಎಂದು ಅರ್ಥ. ಇಂಥವನು ಭಕ್ತನಲ್ಲ. ಅವನದು ಭಕ್ತಿಯೇ ಅಲ್ಲ.

994. ಜಂಗಮದ ಮೂಲಕ ಲಿಂಗದೇವನ ತೃಪ್ತಿ

ಧನಮದದಿಂದ ಸಯದಾನಮದದಿಂದ ಮಾಡಿದೆನೆಂಬುದು
ಕಡೆಮುಟ್ಟದೆ ಹೋಯಿತ್ತು
ಹಸ್ತಪರುಷದಿಂದ ಮುಟ್ಟಿ ಮಾಡಿದುದೆಲ್ಲವು ಸವೆಯಿತ್ತು
ದೃಷ್ಟಿಪರುಷದಿಂದ ನೋಡಿ ಮಾಡಿದೆನೆಂಬುದೆಲ್ಲವು ಹೆಚ್ಚಿತ್ತು.
ವಾಕ್ಪರುಷದಿಂದ ನುಡಿದು ಮಾಡಿದುದೆಲ್ಲವೂ ಅಂತರಿಸಿತ್ತು.
ಮನಪರುಷದಿಂದ ನೆನೆದು ಮಾಡುದುದೆಲ್ಲವು ನಿಂದಿತ್ತು
ಭಾವಪರುಷದಿಂದ ಭಾವಿಸಿದ ಪದಾರ್ಥವೆಲ್ಲವು
ನಿರ್ಭಾವದತ್ತ ವೇಧಿಸಲಾಯಿತ್ತು
ಇಂತೀ ಪಂಚಪರುಷದಿಂದ ಮುಟ್ಟಿ ನೀಡಿದ ಪದಾರ್ಥವೆಲ್ಲವು
ತೋರದ ಮುನ್ನ ಅಮಳ್ಳೈಕ್ಯವಾದವು
ಲಿಂಗದೇವರ ತೃಪ್ತಿಯನರಿದಿಹೆನೆಂದು ಕೆಟ್ಟೆನು. –ಬವದೀ. 997

ಹಣವಿದೆ ಎಂಬ ಮದದಿಂದ ಸಯದಾನ ಎಂದರೆ ದವಸ-ಧಾನ್ಯ ಮುಂತಾದ ಸಾಮಗ್ರಿಗಳು ಇವೆ ಎಂಬ ಅಹಂಕಾರದಿಂದ ಮಾಡಿದ್ದು ಕಡೆಮುಟ್ಟದೆ ಹೋಗುತ್ತದೆ. ದೇವ ಶರಣಾಗತಿಯಿಂದ ಮಾಡಿದ್ದು ವೃದ್ಧಿಯಾಗುತ್ತದೆ. ಹಸ್ತವು ಪರುಷವಾದಾಗ ಮಂತ್ರೋದಕವನ್ನು ಮಾಡಿ ಪ್ರಸಾದಕ್ಕೆ ಸಿಂಪಡಿಸಿದರೆ ಅದು ಹುಲುಸಾಗುತ್ತದೆ. ದೃಷ್ಟಿ ಪರುಷವಾದಾಗ ಪ್ರಸಾದ ಸ್ವೀಕಾರ ಮಾಡುವ ಶರಣ ಸಮೂಹವನ್ನು ನೋಡಿದರೆ ಅವರಿಗೆ ಸಂತೃಪ್ತಿಯಾಗುವುದಲ್ಲದೆ ಪ್ರಸಾದವು ವೃದ್ಧಿಯಾಗುತ್ತದೆ. ವಾಕ್ಪರುಷವಾದಾಗ ಗುರು-ಜಂಗಮ ಶರಣರು ವೃದ್ಧಿಯಾಗಲಿ ಎಂದು ಹರಸಿದರೆ ಜೀವನದಲ್ಲಿ ವೃದ್ಧಿಯಾಗುತ್ತದೆ. ಮನಸ್ಸು ಪರುಷವಾದಾಗ ಹೃತ್ಪೂರ್ವಕವಾಗಿ ಹರಸಿದರೆ ಅದು ಸಿದ್ಧಿಯಾಗುವುದು. ಭಾವವು ಪರುಷವಾದಾಗ ಭಾವಿಸುವ ಎಲ್ಲವೂ ದೈವೀಕರಣಗೊಳ್ಳುವುದು. ಪಂಚ ಪರುಷ ಗುಣದಿಂದ ಮಾಡಿದ ಕಾರ್ಯ ಲಿಂಗದೇವನಿಗೆ ಪ್ರಿಯವಾಗುವುದು.

ಮಾಡುವುದಕ್ಕೂ ಒಂದು ಸೀಮೆಯುಂಟು. ಬ್ರಹ್ಮಾಂಡವನ್ನೇ ಒಡಲನ್ನಾಗಿ ಹೊಂದಿದ ಲಿಂಗದೇವನನ್ನು ತೃಪ್ತಿ ಮಾಡಲು ಅರಿತೆ ಎಂದು ನಾನು ಕೆಟ್ಟೆನು." ಎನ್ನುತ್ತಾರೆ ಗುರು ಬಸವಣ್ಣನವರು.

995. ಅದ್ಭುತ ಆರೋಗಣೆ.

ಕೈಯಲ್ಲಿ ಮುಟ್ಟಿದ ಪದಾರ್ಥ ಕೈಯೊಳಗೆ ಐಕ್ಯ
ಕಂಗಳು ತಾಗಿದ ಪದಾರ್ಥ ಕಂಗಳೊಳಗೈಕ್ಯ
ನಾಲಗೆ ತಾಗಿದ ಪದಾರ್ಥ ನಾಲಗೆಯೊಳಗೈಕ್ಯ
ನೀಡುವ ಪರಿಚಾರಕರು ಬೇಸತ್ತರಲ್ಲದೆ
ಆರೋಗಣೆಯ ಮಾಡುವ ದೇವನೆತ್ತಲೆಂದರಿಯನು
ಬ್ರಹ್ಮಾಂಡವನೊಡಲೊಳಗಡಗಿಸಿಕೊಂಡು ಬಂದ ದೇವಂಗೆ
ಆರೋಗಣೆಯ ಮಾಡಿಸಿಹೆನೆಂಬ ಅಹಂಕಾರದಲ್ಲಿ ಇದ್ದೆನಾಗಿ
ನಾನು ಕೆಟ್ಟ ಕೇಡನೇನೆಂಬೆನಯ್ಯಾ?
ಲಿಂಗದೇವರ ತೃಪ್ತಿಯ ತೆರನ ಬಲ್ಲಡೆ ಹೇಳಾ
ಮಡಿವಾಳ ಮಾಚಯ್ಯಾ —ಬವದೀ. 998

ಶೂನ್ಯ ಸಂಪಾದನೆಯಲ್ಲಿ ಅಲ್ಲಮಪ್ರಭುದೇವರ ಪ್ರಸಾದದ ಆರೋಗಣೆಯ ಸನ್ನಿವೇಶ ಬರುತ್ತದೆ. ಸಹಸ್ರಾರು ಜನರಿಗೆಂದು ಸಿದ್ಧಪಡಿಸಿದ ಭೋಜನದ ಪದಾರ್ಥಗಳನ್ನು ಅಲ್ಲಮಪ್ರಭುದೇವರಿಗೆ ಬಡಿಸಲು ಆರಂಭಿಸುತ್ತಾರೆ. ಎಲ್ಲವನ್ನೂ ಉಣ್ಣುತ್ತಾರೆ. ಮಹಾಮನೆಯ ಉಗ್ರಾಣದಲ್ಲಿದ್ದ ಸಾಮಗ್ರಿಗಳೆಲ್ಲವೂ ಖಾಲಿಯಾಗುತ್ತವೆ. ಪ್ರಭುದೇವರಿಗೆ ಇನ್ನೂ ತೃಪ್ತಿಯಾಗುವುದಿಲ್ಲ. "ನಾನು ದಾಸೋಹ ಮಾಡುವೆ, ನೀಡುವೆ" ಎಂಬ ಹಮ್ಮಿನಿಂದ ಗುರು ಬಸವಣ್ಣನವರು ನೀಡುತ್ತಾರೆ. ಈ ಹಮ್ಮನ್ನು ಅಡಗಿಸಬೇಕೆಂದು ಅಲ್ಲಮಪ್ರಭುದೇವರು ಇನ್ನೂ ಬೇಕು ಎನ್ನುತ್ತಾರೆ. ಕಡೆಗೆ ಗುರು ಬಸವಣ್ಣನವರು ಸೋತು, ಶರಣಾಗಿ "ಇನ್ನು ಸಾಧ್ಯವಿಲ್ಲ; ನನ್ನನ್ನು ನಾನು ಅರ್ಪಿಸುವೆ." ಎಂದಾಗ ಅಲ್ಲಮಪ್ರಭುದೇವರಿಗೆ ತೃಪ್ತಿಯಾಗುತ್ತದೆ ಎಂದು ಬಣ್ಣಿಸಲಾಗಿದೆ.

ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಇದೊಂದು ಕೃತಕ ಕಲ್ಪನೆ. ಪ್ರಭುದೇವರ ವ್ಯಕ್ತಿತ್ವವನ್ನು ವೈಭವೀಕರಿಸಲು ಇದನ್ನು ಶೂನ್ಯ ಸಂಪಾದನೆಕಾರರು ಸೃಷ್ಟಿಸಿದ್ದಾರೆ ಎನ್ನಿಸುತ್ತದೆ. ಅಲ್ಲಮ ಪ್ರಭುಗಳು ದೊಡ್ಡ ಯೋಗಿ; ಸಿಕ್ಕಾಪಟ್ಟೆ ತಿನ್ನುವ ಬಕಾಸುರರೇನಲ್ಲ. ಮಹಾಮನೆಗೆ ಬಂದಾಗ ಮಹಾ ಕೋಪಿಷ್ಟರೆಂಬಂತೆ ಚಿತ್ರಿಸಿರುವುದು, ಇಲ್ಲಿ ತಿನ್ನಬಡಕರೆಂಬಂತೆ ಚಿತ್ರಿಸಿರುವುದು ಅಲ್ಲಮಪ್ರಭುದೇವರಿಗೆ ಶೂನ್ಯ ಸಂಪಾದನೆಕಾರರು ಮಾಡಿರುವ ಅಪಚಾರ ಎಂದೇ ನನ್ನ ಅಭಿಪ್ರಾಯ.

"ಕೈಯಲ್ಲಿ ಮುಟ್ಟಿದ ಪದಾರ್ಥ ಕೈಯಲ್ಲೇ ಅಡಗಿದವು, ಕಣ್ಣಿನಲ್ಲಿ ನೋಡಿದ ಪದಾರ್ಥ ಕಣ್ಣಿನಲ್ಲೇ ಅಡಗಿದವು, ನಾಲಿಗೆ ತಾಗಿದ ಪದಾರ್ಥ ನಾಲಿಗೆಯಲ್ಲೇ ಅಡಗಿದವು. ನೀಡುವ ಪರಿಚಾರಕರು ಬೇಸತ್ತರಲ್ಲದೆ ಆರೋಗಣೆಯ ಮಾಡಿದ ಪ್ರಭುದೇವರಿಗೆ ಏನೂ ಅನ್ನಿಸುತ್ತಲಿಲ್ಲ. ಬ್ರಹ್ಮಾಂಡವನ್ನೇ ಅಡಗಿಸಿಕೊಂಡು ಬಂದ ದೇವಂಗೆ ಆರೋಗಣೆ ಮಾಡಿಸಿ, ತೃಪ್ತಿ ಪಡಿಸುತ್ತೇನೆ ಎನ್ನುವುದು ಹಾಸ್ಯಾಸ್ಪದವಲ್ಲವೆ? ಇಂಥ ಅಹಂಕಾರದಿಂದ ನಾನು ಕೆಟ್ಟೆನು. ದೇವರನ್ನು ತೃಪ್ತಿ ಮಾಡಬಲ್ಲ ವಿಧಾನವಿದ್ದರೆ ಹೇಳಿರಿ ಮಡಿವಾಳ ಮಾಚಿದೇವರೆ" ಎಂದು ಗುರು ಬಸವಣ್ಣನವರು ಕೇಳುತ್ತಾರೆ. ಪ್ರಭುದೇವರು ಹೀಗೆ ಊಟ ಮಾಡಿದರು ಎಂಬುದು ಅವಾಸ್ತವಿಕ, ಬೇರೆ

ಸನ್ನಿವೇಶಗಳಲ್ಲಿ ಬರೆಯಲ್ಪಟ್ಟ ವಚನಗಳನ್ನು ಹೀಗೆ ತಪ್ಪುತಪ್ಪಾಗಿ ಶೂನ್ಯ ಸಂಪಾದನೆಕಾರರು ಜೋಡಿಸಿದ್ದಾರೆ ಎಂದು ನನ್ನ ಅಭಿಪ್ರಾಯ.

996. ದೇವರು ಅಗೋಚರ

ಕಂಡಹರೆಂದು ಕಣ್ಗೆ ಮರೆಮಾಡಿದ
ಕೇಳಿಹರೆಂದು ಕಿವಿಗೆ ಮರೆಮಾಡಿದ
ಮುಟ್ಟಿಹರೆಂದು ಕೈಗೆ ಮರೆಮಾಡಿದ
ಸೋಂಕಿಹರೆಂದು ತನುವಿಂಗೆ ಮರೆಮಾಡಿದ
ನೆನೆದಹರೆಂದು ಮನಕ್ಕೆ ಮರೆಮಾಡಿದ
ಅರಿದಹರೆಂದು ಅಂತರಂಗದಲ್ಲಿ ಮರೆಮಾಡಿದ
ಪೂಜಿಸಿಹರೆಂದು ಕ್ರೀಗೆ ಮರೆಮಾಡಿದ !
ಲಿಂಗದೇವರೊಡನೆ, ಅಹಂಕಾರವ ಮಾಡಿ ಕೆಟ್ಟ
ಕೇಡನೇನೆಂದುಪಮಿಸುವೆನು ?
—ಬವದೀ. 999

ದೇವರು(ಮತ್ತು ಆತ್ಮ) ಪಂಚೇದ್ರಿಯಗಳಿಗೆ ನಿಲುಕುವಂಥವನಲ್ಲ. ಪಂಚಭೂತಗಳಿಗೆ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದು ಗುಣಗಳುಂಟು. ಇವನ್ನು ಪಂಚೇಂದ್ರಿಯಗಳು ಗ್ರಹಿಸಬಲ್ಲವು. ಲಿಂಗದೇವರು ಈ ಐದು ಗುಣಗಳಿಂದ ಬಾಧಿತನಾಗಿಲ್ಲ. ಲೋಕದಲ್ಲೆಲ್ಲ ದೇವನು ಹಾಲಿನಲ್ಲಿ ತುಪ್ಪವಿರುವಂತೆ ಓತಪ್ರೋತವಾಗಿ ತುಂಬಿ ತುಳುಕುತ್ತಿದ್ದಾನೆ. ಆದರೂ ಕಣ್ಣಿಗೆ ಗೋಚರವಾಗುತ್ತಿಲ್ಲ ; ಕಿವಿಗೆ ಕೇಳಿಸುತ್ತಿಲ್ಲ. ಮುಟ್ಟಲು ಕೈಗೆ ಸಿಗುತ್ತಿಲ್ಲ, ಸ್ಪರ್ಶಕ್ಕೆ ನಿಲುಕುತ್ತಿಲ್ಲ. ನೆನೆವ ಮನಕ್ಕೆ ಲಭ್ಯವಾಗುತ್ತಿಲ್ಲ. ಅರಿವಿಗೆ ನಿಲುಕುತ್ತಿಲ್ಲ. ಪೂಜೆಗೆ ಸೀಮಿತನಾಗುತ್ತಿಲ್ಲ. ಬ್ರಹ್ಮಾಂಡಾಂತರ್ಗತವಾದ ದೇವನಾಗಲಿ, ಪಿಂಡಾಂಡದೊಳಗಿರುವ ಆತ್ಮನಾಗಲಿ ಇದೇ ಗುಣಗಳಿಂದ ಕೂಡಿವೆ. ಆದ್ದರಿಂದ "ದೇವನನ್ನು ನಾನು ಅರಿತು ಬಿಡುತ್ತೇನೆ ಎಂಬ ಅಹಂಕಾರದಿಂದ ನಾನು ಕೆಟ್ಟ ಏನು ಹೇಳುವೆ" ಎಂದು ಗುರು ಬಸವಣ್ಣನವರು ದೇವರು (ಮತ್ತು ಆತ್ಮ) ಇಂದ್ರಿಯಕ್ಕೆ ಅಗೋಚರ ಎಂಬುದನ್ನು ಹೇಳಿದ್ದಾರೆ.

997. ಸಾಧಕನ ಹುಡುಕಾಟ

ಶರಣೆಂದು ಪಾದವ ಹಿಡಿದಿಹೆನೆಂದಡೆ ಚರಣದ ನಿಲವು ಕಾಣಬಾರದು,
ಕುರುಹುವಿಡಿದಿಹೆನೆಂದಡೆ ಕೈಗೆ ಸಿಲುಕದು
ಬೆರಸಿ ಹೊಕ್ಕೆಹೆನೆಂದಡೆ ಮುನ್ನವೆ ಅಸಾಧ್ಯ
ಅಕಟಕಟಾ, ಅಹಂಕಾರದಲ್ಲಿ ಕೆಟ್ಟೆನಲ್ಲಾ
ಗುರುವೆ, ಎನ್ನ ಪರಮಗುರುವೆ ಕೆಟ್ಟೆನಲ್ಲಾ,
ಅರಿಯದ ತರಳನ ಅವಗುಣವ ನೋಡುವರೆ ಲಿಂಗದೇವಾ? —ಬವದೀ. 1000

ಸಾಧನಾ ಮಗ್ನರಾದ ಸಾಧಕರು ದೇವರಿಗಾಗಿ ಹಂಬಲಿಸಿ, ಬಗೆಬಗೆಯಾಗಿ ಪರಿತಪಿಸುವುದುಂಟು. "ದೇವಾ ನಿನಗೆ ಶರಣಾಗಿ ಪಾದವನ್ನು ಹಿಡಿಯೋಣವೆಂದರೆ ನಿನ್ನ ಚರಣದ ನಿಲವು ಕಾಣುತ್ತಲಿಲ್ಲ. ಯಾವುದಾದರೂ (ಸ್ತ್ರೀ–ಪುರುಷ ಎಂಬ) ಕುರುಹು ಹಿಡಿದು ಹುಡುಕಿದರೆ ನೀನು ಕೈಗೆ ಸಿಗುವುದಿಲ್ಲ. ನಿನ್ನೊಳಗೆ ಬೆರೆಸಿ ಬಿಡೋಣ ಎಂದರೆ ಅದು ಅಸಾಧ್ಯ. ನನ್ನಲ್ಲಿ ಅಹಂಕಾರ ಅಳಿದಿರಲಿಕ್ಕಿಲ್ಲ. ಗುರುವೆ, ಪರಮ ಗುರುವೆ ನೀನು ಅನುಗ್ರಹಿಸು. ಏನೂ ಅರಿಯದ ಮುಗ್ಧ ಮಗನ ದುರ್ಗುಣಗಳನ್ನು ನೀನು ಎಣಿಸುತ್ತಿರುವೆಯಾ? ಬೇಡ ಇದು ನಿನಗೆ ತರವಲ್ಲ." ಎನ್ನುತ್ತಾರೆ ಸಾಧಕ ಜೀವಿ ಬಸವಣ್ಣನವರು.

998. ಜಂಗಮವೇ ಶಿಕ್ಷಕ.

ಧ್ಯಾನ ಮೌನವೆಂಬ ಶಸ್ತ್ರವ ಪಿಡಿಯಲರಿಯದೆ
ಅಹಂಕಾರದ ಧಾರೆಯ ಮೊನೆಯಲಗೆಂಬ ಶಸ್ತ್ರವ ಪಿಡಿದು ಕೆಟ್ಟೆನಯ್ಯಾ
ಅಂಜುವೆನಂಜುವೆನಯ್ಯಾ
ಜಂಗಮ-ಲಿಂಗವೆಂಬ ಭಾಷೆ ಪಲ್ಲಟವಾಯಿತ್ತು
ಇನ್ನು ಜಂಗಮವೆಂಬ ಶಿಕ್ಷಾಶಸ್ತ್ರದಲ್ಲಿ ಎನ್ನ ಹೊಯ್ದು ಬೈದು
ರಕ್ಷಿಸುವುದು ಲಿಂಗದೇವಾ. —ಬವದೀ. 1001

"ದೇವನನ್ನೊಲಿಸುವ ಪ್ರಮುಖ ಸಾಧನಗಳೆಂದರೆ ಧ್ಯಾನ ಮತ್ತು ಮೌನ. ಇವನ್ನು ಹಿಡಿಯುವುದು ಬಿಟ್ಟು ಅಹಂಕಾರ ಎಂಬ ಚೂಪಾದ ಮೊನೆಯುಳ್ಳ ಕತ್ತಿಯನ್ನು ಹಿಡಿದು ನಾನು ಕೆಟ್ಟೆನು ಇದರಿಂದ ನನಗೆ ಅಂಜಿಕೆಯಾಗುತ್ತಿದೆ. ಜಂಗಮವೆ ಲಿಂಗ ಎಂಬ ನಂಬಿಕೆಯು ಸಡಿಲವಾಯಿತ್ತು. ಬೇರೆ ಉಪಾಯವಿಲ್ಲ. ಜಂಗಮ ಎಂಬ ಶಿಕ್ಷಾಶಸ್ತ್ರದಿಂದ ಹೊಯ್ದು ನನಗೆ ಬುದ್ಧಿ ಕಲಿಸು, ಲಿಂಗದೇವಾ.

999. ಅಹಂಕಾರ ಸಲ್ಲದು.

ಒತ್ತಿ ಹೊಸೆದ ಕಿಚ್ಚ ನಾ ಮಾಡಿದೆನೆಂದು ಮುಟ್ಟಿ ಹಿಡಿದಡೆ
ಕೈ ಬೇಯದಿಹುದೆ ?
ಎನ್ನಿಂದಾಯಿತ್ತು, ಎನ್ನಿಂದಾಯಿತ್ತು, ಎನ್ನದಿರು ಮನವೆ
ನಾನು ಮಾಡಿದೆನೆನ್ನದಿರು ಮನವೆ ಲಿಂಗದೇವಾ. —ಬವದೀ. 1002

ಹಿಂದಿನ ಕಾಲದಲ್ಲಿ ಬೆಂಕಿ ಹೊತ್ತಿಸುವಾಗ ಬಹಳ ಶ್ರಮಪಡುತ್ತಿದ್ದರು. ಚಕ್ಕಮಕ್ಕಿ ಕಲ್ಲುಗಳ ಮಧ್ಯೆ ಅರಳೆ(ದೂದಿ)ಯನ್ನಿಟ್ಟು ಕುಟ್ಟಿ ಬೆಂಕಿಯ ಕಿಡಿಯನ್ನು ಹೊತ್ತಿಸಿ ಅದನ್ನು ಬೇರೆ ಇತರ ವಸ್ತುಗಳಿಗೆ ಹಚ್ಚಿಕೊಳ್ಳುತ್ತಿದ್ದರು. ಬಹಳ ಕಷ್ಟಪಟ್ಟು ಹಚ್ಚಿದ ಬೆಂಕಿ ಎಂದು ಮುಟ್ಟಿ ಹಿಡಿದರೆ ಕೈ ಸುಡದೆ ಇರುವುದೆ? ಹಾಗೆ ವ್ಯಕ್ತಿಯು ಏನಾದರೂ ಕೆಲಸ ಸೇವೆ, ದಾಸೋಹ ಮಾಡಿ ಇದು ನನ್ನಿಂದಲೇ ಆಯಿತು ಎಂದು ಹೇಳಿಕೊಳ್ಳಲು ಹೋಗಬೇಡ ಮನವೆ' ನಾನು ಮಾಡಿದೆ ಎಂಬ ಅಹಂಕಾರ ಒಳ್ಳೆಯದಲ್ಲ, ಅದು ಭವಕ್ಕೆ ಬೀಜವಾಗುವುದು."

1000. ಸಂದೇಹ ಬೇಡ

ಎನ್ನಂಗದ ಮೇಲಿದ್ದ ಲಿಂಗವ ದಿಟಮಾಡಲರಿಯೆನು.
ಜಂಗಮವೆ ಲಿಂಗವೆಂಬ ಮಾತೆನಗೆ ಕಷ್ಟ
ಕಲಹ ಕಡುಗೋಪಿ ನಾನಯ್ಯಾ, ದುರಾಚಾರಿ ನಾನು
ಎನಗೆ ಕರುಣಿಸು ಲಿಂಗದೇವಾ. —ಬವದೀ. 1003

ಎನ್ನಂಗದ ಮೇಲಿರುವ ಲಿಂಗದಲ್ಲಿ ನಿಜವಾದ ವಿಶ್ವಾಸ ನನಗಿಲ್ಲ. ಇದ್ದಿದ್ದರೆ ಸಾಕಾರ ಜಂಗಮ ನಿರಾಕಾರ ಲಿಂಗದೇವನ ಪ್ರತಿರೂಪ ಎಂದು ತಿಳಿಯದೆ ಇರುತ್ತಿದ್ದೆನೆ ? ಏಕೆಂದರೆ ಒಮ್ಮೊಮ್ಮೆ ಜಂಗಮ ದೊಡನೆ ಕಲಹ ಮಾಡುವ ಕಡುಗೋಪಿಯಾಗಿ ಬಿಡುತ್ತೇನೆ. ನಾನು ದುರಾಚಾರಿ. ಆದರೂ ನೀನು ಕ್ಷಮಿಸಿ ನನ್ನನ್ನು ಅನುಗ್ರಹಿಸು ಲಿಂಗದೇವ."

ಗುರು ಬಸವಣ್ಣನವರು ಈ ವಚನದಲ್ಲಿ ತಮ್ಮ ಅನುಭವ ಹೇಳದ ಭಕ್ತರಿಗೆ ಮಾರ್ಗದರ್ಶನ ಮಾಡಿದ್ದಾರೆ. ಅವರಲ್ಲಿ ಕೋಪವಾಗಲಿ, ಕಲಹ ಮಾಡುವ ಪ್ರವೃತ್ತಿಯಾಗಲಿ ಇರಲಿಲ್ಲವಷ್ಟೆ. ಅನೇಕ ಭಕ್ತರು ಜಂಗಮರೊಡನೆ ಉತ್ತಮ ಸಂಬಂಧ ಇಟ್ಟುಕೊಂಡಿರುತ್ತಾರೆ. ಆದರೆ ಒಮ್ಮೊಮ್ಮೆ

ಸಿಟ್ಟಿಗೆದ್ದು ಸಂಬಂಧವನ್ನು ಕೆಡಿಸಿಕೊಂಡು ಬಿಡುತ್ತಾರೆ. ಅದನ್ನೇ ದುರಾಚಾರವೆಂದು ಗುರು ಬಸವಣ್ಣನವರು ಕರೆದಿದ್ದಾರೆ.

1001. ದೇಹದಲ್ಲಿ ದೇವನಿದ್ದಾನೆ.

ಮುಗಿಲ ಮರೆಯ ಮಿಂಚಿನಂತೆ, ಒಡಲ ಮರೆಯ ಆತ್ಮನಂತೆ
ನೆಲದ ಮರೆಯ ನಿಧಾನದಂತೆ ಇಪ್ಪ
ನಿಮ್ಮ ನಿಲವನಾರು ಬಲ್ಲರು ದೇವಾ?
ನಿಮ್ಮ ನಿಲವ ಹಲವು ಕಾಲದಿಂದ ಕಂಡು ಕಂಡು
ಕಡೆಗಣಿಸಿ, ಮರೆದು ಮತಿಗೆಟ್ಟು ಮರುಳಾದೆನು
ಎನ್ನ ತಪ್ಪಿಂಗೆ ಕಡೆಯಿಲ್ಲ ಕಾಣಾ
ತ್ರಾಹಿ ತ್ರಾಹಿ ಕಾಯಯ್ಯಾ. ಲಿಂಗದೇವಾ. —ಬವದೀ. 1004

ದೇಹದಲ್ಲಿ ಸೃಷ್ಟಿಕರ್ತನಾದ ಪರಮಾತ್ಮನಿದ್ದಾನೆ. ಮೋಡದಲ್ಲಿ ಹುದುಗಿರುವ ಮಿಂಚಿನಂತೆ. ಶರೀರದ ಮರೆಯಲ್ಲಿರುವ ಆತ್ಮನಂತೆ, ನೆಲದ ಮರೆಯ ನಿಧಾನದಂತೆ ದೇವನು ದೇಹದಲ್ಲಿ ಇದ್ದಾನೆ. ಸಾಧನಾವಸ್ಥೆಯಲ್ಲಿ ಸಾಧಕನು ಇದನ್ನರಿಯದೆ ದೇವರನ್ನು ಹೊರಗೆ, ಮೇಲೆ ಹುಡುಕುವನು. ಆತ್ಮವು ಅನುಭವಕ್ಕೆ ಬರುತ್ತಿದ್ದರೂ ಕಡೆಗಣಿಸಿ, ಮರೆದು, ಮತಿಗೆಟ್ಟು ಮರುಳನಂತೆ ಹುಡುಕುವನು. ಹೀಗಾಗಿ ನನ್ನ ತಪ್ಪುಗಳಿಗೆ ಲೆಕ್ಕವಿಲ್ಲ. ನೀನೇ ರಕ್ಷಿಸು ಲಿಂಗದೇವ.

1002. ಜಂಗಮ ಲಿಂಗವೇ ಶ್ರೇಷ್ಠ

ಲಿಂಗವೆಂತಿಪ್ಪುದೆಂದರಿಯೆನು
ಲಿಂಗದ ನಿಲುವೆಂತುಟೆಂಬುದನರಿಯೆನು
ಲಿಂಗಾರ್ಚನೆಯ ಮಾತು ಎನಗೇಕಯ್ಯಾ ?
ಜಂಗಮಲಿಂಗವಾಗಿ ಬಂದು ನೀವಿರುತ್ತಿರಲು
ಸ್ಥಾವರಕ್ಕೆ ಮಚ್ಚಿ ಮರುಳಾದೆನು ಲಿಂಗದೇವಾ.
ಎನ್ನ ತಪ್ಪನೆ ಎಣಿಸಿಹೆನೆಂದಡೆ ಕಡೆಯಿಲ್ಲ. —ಬವದೀ. 1005

ಕೆಲವೊಂದು ವಚನದಲ್ಲಿ ಕೆಲವು ಸಂಗತಿಗಳನ್ನು ಒತ್ತಿ ಹೇಳುವರು. ಆಗ ನಮಗೆ ಇನ್ನೊಂದರ ಬಗ್ಗೆ ಸಂದೇಹ ಬರುತ್ತದೆ. ಇಲ್ಲಿ ಸಾಮಾನ್ಯ ಭಕ್ತರಿಗಾಗಿ ಒಂದು ವಿಷಯ ಪ್ರಸ್ತಾಪಿಸಿದ್ದಾರೆ. ದೇವರು (ಲಿಂಗ) ಹೇಗಿದ್ದಾನೆ ಎಂಬುದನ್ನು ಅರಿಯೆನು. ದೇವರ ನಿಲುವು ಹೇಗಿದೆ ಎಂಬುದನ್ನು ಅರಿಯೆನು. ಹೀಗಿದ್ದಾಗ ಲಿಂಗಾರ್ಚನೆಯ ಸುದ್ದಿ ಏತಕ್ಕೆ. ನೀವು ಜಂಗಮಲಿಂಗವಾಗಿ ಬಂದು ಮಾರ್ಗದರ್ಶನ ಮಾಡುತ್ತೀರಿ. ಇದನ್ನು ನಂಬದೆ ಸ್ಥಾವರಕ್ಕೆ (ಕೇವಲ ಇಷ್ಟಲಿಂಗ ಪೂಜೆಯಲ್ಲೇ) ಮೆಚ್ಚಿ ನಾನು ಮರುಳಾಗಿದ್ದೇನೆ. ಇಂಥ ತಪ್ಪನ್ನು ಹಲವಾರು ಮಾಡುತ್ತಿರುವೆ." ಎನ್ನುತ್ತಾರೆ ಗುರು ಬಸವಣ್ಣನವರು. ಜಂಗಮ (ಸಮಾಜ)ವನ್ನು ಕಡೆಗಣಿಸಿ ಕೇವಲ ಲಿಂಗಪೂಜೆಯಲ್ಲಿ ಆಸಕ್ತರಾದವರಿಗೆ ಇಲ್ಲಿ ಬೋಧೆ ಇದೆ.

1003. ಸಂಸಾರ ಶರಧಿ.

ಕಾಲಲ್ಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು
ತೇಲಲೀಯದು ಗುಂಡು, ಮುಳುಗಲೀಯದು ಬೆಂಡು !
ಇಂತಪ್ಪ ಸಂಸಾರ ಶರಧಿಯ ದಾಂಟಿಸಿ
ಕಾಲಾಂತಕನೆ ಕಾಯೊ, ಲೀಗದೇವಯ್ಯಾ —ಬವದೀ. 1006

ಈ ಸಂಸಾರ ಒಂದು ಸಮುದ್ರ, ಇದರಲ್ಲಿ ಸುಖದುಃಖ ಹೆದ್ದೆರೆಗಳು ಬಂದು ನಿರಂತರವಾಗಿ ಬಡಿಯುತ್ತಿರುವವು. ಈ ಮಾನವ ಜೀವಿ ಕಾಲಿನಲ್ಲಿ ಪಾಪದ ಗುಂಡನ್ನು ಕೊರಳಲ್ಲಿ ಪುಣ್ಯದ ಬೆಂಡನ್ನು ಕಟ್ಟಿಕೊಂಡು ತೇಲಾಡುತ್ತಿರುವನು. ಪೂರ್ತಿ ತೇಲಲು ಪಾಪದ ಗುಂಡು ಬಿಡುತ್ತಲಿಲ್ಲ. ಬಹಳ ಕಾಲ ಬೆಂಡು ನೀರಿನ ಸಂಪರ್ಕದಲ್ಲಿದ್ದರೆ ಅದು ನಿಧಾನವಾಗಿ ಕೊಳೆಯುತ್ತದೆ. ಗುಂಡು ಇದ್ದಂತೆಯೇ ಇರುತ್ತದೆ. ಆಗ ವ್ಯಕ್ತಿ ಮುಳುಗುತ್ತಾನೆ." ಲಿಂಗದೇವಾ, ಪುಣ್ಯದ ಬೆಂಡು ಕೊಳೆಯುವ ಮೊದಲು ಪಾಪ ಗುಂಡು ಮುಳುಗಿಸುವ ಮೊದಲು ಈ ಸಂಸಾರ ಸಾಗರವನ್ನು ದಾಟಿಸಿ, ಮುಕ್ತಿಯ ದಡವನ್ನು ಮುಟ್ಟಿಸು." ಎಂದು ಲಿಂಗದೇವನಲ್ಲಿ ಸಾಧಕ ಬಸವಣ್ಣನವರು ಬೇಡುತ್ತಾರೆ.

1004. ಪರದೇಶಿ ನಾನು.

ಈ ಕೈಯಲೆ ಸುಖವು, ಈ ಕೈಯಲೆ ದುಃಖವು
ಏಕಯ್ಯಾ, ನೀ ನಮ್ಮ ಬರಿದೆ ಬಳಲಿಸುವೆ ?
ನಾನಾರ ಸೇರುವೆನಯ್ಯಾ ? ಆರೂ ಇಲ್ಲದ ದೇಶಿಗ ನಾನು.,
ಲಿಂಗದೇವಾ.
–ಬವದೀ. 1007

ಸುಖವನ್ನು, ಹರ್ಷವನ್ನು ನೀಡುವ ಸಂಗತಿಗಳು ಘಟಿಸುತ್ತವೆ; ಸುದ್ದಿಗಳು ಕಿವಿಯನ್ನು ತಲ್ಪುತ್ತವೆ. ಜೊತೆಗೇ ದುಃಖವನ್ನು ನೀಡುವ ಸಂತಾಪ ಉಂಟು ಮಾಡುವ ಸಂಗತಿಗಳು ಸಂಭವಿಸುತ್ತವೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಸಾಧಕ ಜೀವಿ ಬಸವಣ್ಣನವರು ದೇವರಲ್ಲಿ ಮೊರೆ ಇಡುತ್ತಾರೆ." ಏಕೆ ಹೀಗೆ ಸುಖ ದುಃಖಗಳನ್ನು ಜೊತೆಜೊತೆಯಾಗಿಯೇ ಕೊಟ್ಟು ಬಳಲಿಸುತ್ತಿರುವೆ. ನಾನು ಯಾರ ಆಸರೆಯನ್ನು ಪಡೆಯಲಿ ? ಯಾರೂ ಇಲ್ಲದ ಪರದೇಶಿ ನಾನು. ನೀನೇ ನಮ್ಮ ರಕ್ಷಕ, ಪರಮ ಬಂಧು, ಲಿಂಗದೇವಾ."

1005. ದೇವರ ಲೀಲೆ

ಅಹುದಹುದು :
ಕೆರೆಯ ತಪ್ಪಿ ಬಾವಿಯ ಬಿದ್ದಂತೆ
ಮುಳ್ಳ ಕಳೆದು ದಸಿಯ ಮೆಟ್ಟಿದಂತೆ
ಬದುಕಿದ ಹಕ್ಕಿಯ ಕಿಚ್ಚಿನೊಳಗಿಕ್ಕುವರೆ, ಲಿಂಗದೇವಾ?
–ಬವದೀ. 1008

ಸಾಧಕರ ಜೀವನದ ಕಾಳರಾತ್ರಿ (Dark night of the soul) ಒಂದು ವಿಶೇಷ ಅನುಭವ ಆಗ ದೇವರ ಜೊತೆಗೆ ಮುನಿಸು, ಕೋಪ, ತಾಪ, ವಿಷಾದ ಮುಂತಾದ ಭಾವನೆ ವ್ಯಕ್ತವಾಗುವುದು. "ಅಹುದಹುದು. ನೀನು ಕರುಣೆ ಎನ್ನುವರು. ಅದೆಂತೋ ತಿಳಿಯದು. ಕೆರೆಯಲ್ಲಿ ಮುಳುಗುತ್ತಿದ್ದವನನ್ನು ಮೇಲೆತ್ತಿ ಭಾವಿಯಲ್ಲಿ ಬಿಸುಟಿದಂತೆ, ಸಣ್ಣದಾದ ಮುಳ್ಳು ತೆಗೆದು ಚೂಪಾದ ಬಿದಿರಿನ ಕೋಲಿಯನ್ನು ತುಳಿದಂತೆ ನೀನು ಸಂಕಷ್ಟ ಕೊಡಬಹುದೆ ? ಜೀವಂತ ಇರುವ ಹಕ್ಕಿಯನ್ನು ಯಾರಾದರೂ ಬೆಂಕಿಯಲ್ಲಿ ಹಾಕುವರೆ? ನಿನ್ನನ್ನು ನಂಬಿದವರಿಗೆ ವಿಪರೀತ ಸಂಕಷ್ಟ ಕೊಡುವರೆ ? ಎಂದು ಲಿಂಗದೇವನಲ್ಲಿ ಕೇಳುತ್ತಾರೆ. ದೇವರಿಗೆ ಇದು ಲೀಲೆಯಾಗಿ ತೋರಬಹುದು. ಆದರೆ ಸಾಧಕರಿಗೆ ಪ್ರಾಣ ಸಂಕಟವನ್ನುಂಟು ಮಾಡುತ್ತದೆ.

1006. ಲಿಂಗದೇವನಲ್ಲಿ ಶರಣಾಗತಿ

ಬಲೆಗೆ ಸಿಲ್ಕಿದ ಮೃಗದಂತೆ ನಾನಯ್ಯಾ
ಮರೆದಪ್ಪಿದ ಹುಲ್ಲೆಯಂತೆ ದೆಸೆದೆಸೆಗೆ ಬಾಯಿಬಿಡುತ್ತಿದ್ದೇನೆ
ನಾನಾರ ಸಾರುವೆನಯ್ಯಾ, ತಾಯಾಗಿ ತಂದೆಯಾಗಿ ನೀನೆ
ಸಕಲ ಬಂಧು ಬಳಗ ನೀನೆ ಲಿಂಗದೇವಾ.
–ಬವದೀ. 1009

ದೇವನಿಗಾಗಿ ಹಂಬಲಿಸುವ ಸಾಧಕರ ಮನಸ್ಥಿತಿ ಹೇಗಿರುವುದೆಂದರೆ, ಬಲೆಗೆ ಸಿಕ್ಕಿ ಬಿದ್ದ ಮೃಗದಂತೆ. ಬೇಟೆಗಾರನು ಹರಡಿದ ಬಲೆಗೆ ಸಿಕ್ಕಿ ಬಿದ್ದ ಮೃಗವು ಹತಾಶ ಮನೋಭಾವದಿಂದ ಹೊಯ್ದಾಡುತ್ತದೆ. ಸ್ವಲ್ಪ ಹೊತ್ತಿನಲ್ಲಿ ತಾನು ಬೇಟೆಗಾರನ ಕೈಲಿ ಸಿಕ್ಕಿ ವಧೆಯಾಗುತ್ತೇನೆ ಎಂದು ತೊಳಲಾಡುತ್ತದೆ. ಹಾಗೆ ಸಾಧಕಜೀವಿ ದೇವರ ಕೃಪೆಯಾಗದೆ ಇದ್ದರೆ 'ಭವ' ಎಂಬ ಬೇಟೆಗಾರನ ಕೈವಶವಾಗುತ್ತೇನೆ ಎಂದು ಚಟಪಟಿಸುತ್ತಾನೆ. ಒಂದು ಪೊದೆಯ ಆಶ್ರಯವನ್ನು ಪಡೆದು ಅದರ ಮರೆಯಲ್ಲಿ ನಿಂತ ಜಿಂಕೆಗೆ ಆ ಪೊದೆಯು ತಪ್ಪಿ ಹೋದರೆ ಅದು ಗಾಬರಿಯಿಂದ ದೆಸೆದೆಸೆಗೆ ತಿರುಗಿ ನೋಡುತ್ತದೆ ಲಿಂಗದೇವಾ, ನೀನು ತಾಯಿ ತಂದೆ, ಸಕಲ ಬಂಧು ಬಳಗ ನಿನ್ನ ಬಿಟ್ಟು ನಾನು ಬೇರೆ ಯಾವ ಆಶ್ರಯವನ್ನು ಕೋರಲಿ?

1007 ಅನುಗ್ರಹಕ್ಕಾಗಿ ಕೋರಿಕೆ.

ಅಯ್ಯಾ, ಎಳಗರು ತಾಯನರಸಿ ಬಳಲುವಂತೆ
ನಾ ನಿಮ್ಮನರಸಿ ಬಳಲುತ್ತಿದ್ದೇನೆ.
ಅಯ್ಯಾ, ನೀವೆನ್ನ ಮನಕ್ಕೆ ನೆಲೆವನೆಯಾಗಿ
ಕಾರುಣ್ಯವ ಮಾಡು, ಕಾರುಣ್ಯವ ಮಾಡು
ನೀನಿನಿತು ಲೇಸನೀಯಯ್ಯಾ
ಅಂಬೆ ಅಂಬೆ ಲಿಂಗದೇವಾ.
–ಬವದೀ. 1010

"ದೇವಾ, ಎಳೆಯ ಕರು ತಾಯಿ ಹಸುವಿಗಾಗಿ ಕಾಯ್ದು ಬಳಲುವಂತೆ. ನಾನು ನಿಮಗಾಗಿ ಹಂಬಲಿಸುತ್ತಲಿದ್ದೇನೆ. ಎಳೆಯ ಕರುವಿಗೆ ತಾಯಿಯ ಹಾಲಿನ ಹೊರತು ಬೇರೆ ಗತಿಯಿಲ್ಲ ಹೇಗೋ ಹಾಗೆ ನಿನ್ನ ಅನುಗ್ರಹದ ಹೊರತು ನನಗೆ ಬೇರೆ ಗತಿ ಇಲ್ಲ. ಆದ್ದರಿಂದ ನೀನು ನನ್ನ ಮನಸ್ಸಿಗೆ ನೆಲೆವನೆಯಾಗಿ ಅರ್ಥಾತ್ ಆಶ್ರಯವಾಗಿ ಕಾರುಣ್ಯವ ಮಾಡು, ನನಗೆ ಸ್ವಲ್ಪವಾದರೂ ಲೇಸ(ಒಳ್ಳೆಯದ)ನ್ನು ಮಾಡು ; ಎಳೆಗರುವಿನಂತೆ ಅಂಬಾ ಅಂಬಾ ಎಂದು ಮೊರೆ ಇಡುತ್ತಲಿದ್ದೇನೆ.

1008 ಲಿಂಗಾಂಗ ಯೋಗ ಶ್ರೇಷ್ಠ

ಹರಿವ ವಾಯುವ ನಿಲುಸುವ ನೇಮವೆ
ಅಮೃತವಾಗಿಪ್ಪುದು ಸಿದ್ಧರಾಮಯ್ಯಂಗೆ.
ಆ ನೇಮ ವಿಷದಂತಲ್ಲ
ಈ ನೇಮ, ಆ ನೇಮ ಭೇದವೆಂದು ವಾದಿಪ ಕಾರಣ
ಬೋಧಿಪುದಯ್ಯಾ, ಲಿಂಗದೇವನ ಶರಣ ಮಡಿವಾಳ ತಂದೆ. –ಬವದೀ. 1011

ವಾಯುವಿನ ಚಲನೆಯನ್ನು ನಿಯಂತ್ರಿಸುವ ಪ್ರಾಣಾಯಾಮ(ಹಠಯೋಗ ವಿದ್ಯೆ)ವೇ ಅಮೃತವಾಗಿ ಭಾವಿಸುತ್ತಾರೆ ಸಿದ್ಧರಾಮಯ್ಯನವರು. ಅದನ್ನೇನೂ ಕೆಟ್ಟದೆನ್ನುವುದಿಲ್ಲ. ಆದರೇ ಅದೇ ಅಂತಿಮವಲ್ಲ. ನಮ್ಮ (ಲಿಂಗಾಂಗ ಯೋಗದ) ಮಾರ್ಗದ ಶ್ರೇಷ್ಠತೆ ಏನು ಎಂಬುದನ್ನು ಮಡಿವಾಳ ಮಾಚಿ ತಂದೆಯವರೆ ನೀವೇ ಬೋಧಿಸಿರಿ.

1009 ಗುರು ಕಾರುಣ್ಯದ ಮಹತಿ

ಗುರುಕಾರುಣ್ಯವೇ ಸದಾಚಾರ, ಗುರುಕಾರುಣ್ಯವೇ ಶಿವಾಚಾರ
ಗುರುಕಾರುಣ್ಯವೇ ಪ್ರಸಾದರುಚಿ
ಮುಂದೆ ಗುರು, ಹಿಂದೆ ಲಿಂಗ ಲಿಂಗದೇವಾ.
–ಬವದೀ. 1012

ಜೀವನದಲ್ಲಿ ಗುರು ಕಾರುಣ್ಯ ಎನ್ನುವುದು ಬಹುಮುಖ್ಯ ಸಂಗತಿ. ಅದೇ ಸದಾಚಾರ. ಶಿವಾಚಾರ ಅಥವಾ ಸಾಮಾಜಿಕ, ಧಾರ್ಮಿಕ ಸಮಾನತೆ ಸಾಧ್ಯವಾಗುವುದು ಗುರು ಕೊಡುವ

ದೀಕ್ಷೆಯಿಂದಲೇ. ಗುರು ಕಾರುಣ್ಯ, ಇಷ್ಟಲಿಂಗದೀಕ್ಷೆ ಪಡೆದ ಬಳಿಕವೇ ಕರುಣ ಪ್ರಸಾದ ಮತ್ತು ಗಣ ಪ್ರಸಾದ ಲಭ್ಯವಾಗುತ್ತದೆ. ಬಾಕಿ ಜನರು ದೇವರ ಪ್ರಸಾದಕ್ಕಾಗಿ ಗುಡಿಗಳನ್ನು ಆಶ್ರಯಿಸಬೇಕಾಗುತ್ತದೆ. ಲಿಂಗಾಯತನು ತನ್ನ ಮನೆಯಲ್ಲೇ ಪೂಜಿಸಿ ಕರುಣ ಪ್ರಸಾದ ಪಡೆಯುತ್ತಾನೆ. ಗುರು ಕಾರುಣ್ಯ ಪಡೆದಾದ ಬಳಿಕವೇ ಸಾಮಾಜಿಕ ಗಣ ಪ್ರಸಾದದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಹೀಗೆ ಮೊದಲು ಗುರು, ಗುರುವು ಇಷ್ಟಲಿಂಗ ಕೊಟ್ಟಾದ ಬಳಿಕ ಉಳಿದುದೆಲ್ಲ ಲಭ್ಯ.

1010 ಅನುಗ್ರಹಕ್ಕಾಗಿ ಹಂಬಲ

ಎನ್ನಯ್ಯಾ ನಿಮ್ಮನರಸುತ್ತಿದ್ದೇನೆ, ಎನ್ನಯ್ಯಾ ನಿಮ್ಮನರಸುತ್ತಿದ್ದೇನೆ,
ಎನ್ನಯ್ಯಾ ಕೀಟಧ್ಯಾನದಲ್ಲಿ ನಿಮ್ಮನರಸುತ್ತಿದ್ದೇನೆ
ಎನ್ನಯ್ಯಾ ಲಿಂಗದೇವಾ
ಭ್ರಮರದ ಲೇಸಿನಂತೆ ಕಾರುಣ್ಯವ ಮಾಡು.
ತಪ್ಪೆನ್ನದು ತಪ್ಪೆನ್ನದು ಶಿವಧೋ! ಶಿವಧೋ! —ಬವದೀ. 1013

ಗುರು ಬಸವಣ್ಣನವರಿಗೆ ವಿಶೇಷ ದಿವ್ಯಾನುಭವ ಆಗುವ ಮೊದಲು ಅವರ ಮನಸ್ಥಿತಿ ಹೇಗಿತ್ತೆಂಬುದನ್ನು ಈ ವಚನವು ಚಿತ್ರಿಸುತ್ತದೆ. "ಅಯ್ಯಾ, ಎನ್ನಯ್ಯಾ ನಿಮ್ಮನ್ನು ಹುಡುಕುತ್ತಿದ್ದೇನೆ. ಒಂದು ಕೀಟವನ್ನು ಹೇಗೆ ಭ್ರಮರವು ತನ್ನನ್ನು ಎತ್ತಿಕೊಂಡು ಹೋಗುತ್ತದೆ, ಪರಿವರ್ತಿಸುತ್ತದೆ ಎಂದು ಕಾಯುವುದೋ ಹಾಗೆ ನಿನ್ನ ಅನುಗ್ರಹಕ್ಕಾಗಿ ನನ್ನ ಮನ ಹಂಬಲಿಸುತ್ತಿದೆ. ಭ್ರಮರವು ಕೀಟವನ್ನು ಅನುಗ್ರಹಿಸುವಂತೆ ನೀನು ಕಾರುಣ್ಯವ ಮಾಡು. ಒಂದು ವೇಳೆ ನನ್ನದೇನಾದರೂ ತಪ್ಪುಗಳಿದ್ದರೆ ಮನ್ನಿಸು." ಎಂದು ಬೇಡಿಕೊಳ್ಳುತ್ತಾರೆ.

1011 ಅನಿಮಿಷರ ಗುರು ಬಸವಣ್ಣ

ಎನ್ನ ಕರಸ್ಥಲದ ಲಿಂಗವ ಅನಿಮಿಷ ಕೊಂಡನು,
ಅನಿಮಿಷನ ಕರಸ್ಥಲದ ಲಿಂಗವ ನೀವು ಕೊಂಡಿರಿ
ನಿಮ್ಮ ಕರಸ್ಥಲವೇ ಪರಸ್ಥಲವಾಯಿತ್ತು, ಕುರುಹಳಿದಲ್ಲಿ ಕುರುಹ ಕೊಂಬ ಪರಿ ಎಂತಯ್ಯಾ
ಕೊಡುವವರು ಕೊಂಬವರೊಳಗೆ ಸಿಲುಕಿದ ಬಳಿಕ
ಕೊಂಬವರು ಕೊಡುವವರೊಳಗೆ ಸಿಲುಕಿದ ಬಳಿಕ ಲಿಂಗದೇವ ಪ್ರಭುವೆ
ನಿಮ್ಮ ಕರಸ್ಥಲದ ಲಿಂಗವೆನಗೆ ಸಾಧ್ಯವಹ ಪರಿಯೆಂತಯ್ಯಾ ? —ಬವದೀ. 1014

ಇದು ಒಂದು ಐತಿಹಾಸಿಕ ಸತ್ಯವನ್ನು ಸಾರುವ ವಚನ. ಗುರು ಬಸವಣ್ಣನವರೇ ಇಷ್ಟಲಿಂಗ ಜನಕರು ಎಂಬುದಕ್ಕೆ ಪುಷ್ಟಿ ಕೊಡುತ್ತದೆ. ಗುರು ಬಸವಣ್ಣನವರೇ ಇಷ್ಟಲಿಂಗ ಕೊಟ್ಟವರು ಎಂದು ನಾವು ಹೇಳುತ್ತಲೇ ಅನಿಮಿಷಯ್ಯನು ಪ್ರಭುದೇವರಿಗೆ ಕೊಟ್ಟ, ಇದು ಮೊದಲೇ ಘಟಿಸಿದ ಘಟನೆಯಲ್ಲವೆ? ಎಂದು ಕೆಲವರು ಪ್ರಶ್ನಿಸುತ್ತಾರೆ. ಕೂಡಲ ಸಂಗಮದಲ್ಲಿ ಗುರು ಬಸವಣ್ಣನವರು ಸಾಕ್ಷಾತ್ಕಾರ ಹೊಂದಿ, ಇಷ್ಟಲಿಂಗದ ಪರಿಕಲ್ಪನೆ ಪಡೆದು ಸಾಕ್ಷಾತ್ ದೇವರಿಂದಲೇ ಅದಕ್ಕೆ ಚಿತ್ಕಳೆಯನ್ನು ಅವತೀರ್ಣ ಮಾಡಿಕೊಂಡರು. ಅವರು ಸಂಚಾರ ಮಾಡುತ್ತಿದ್ದ ಕಾಲದಲ್ಲಿ ಐಹೊಳೆ-ಪಟ್ಟದ ಕಲ್ಲಿನ ರಾಜಕುಮಾರ ವಸುಧೀಶ ಬೇಟೆಗೆ ಹೊರಡುತ್ತಾನೆ. ಲಿಂಗದರ್ಶನವಿಲ್ಲದೆ ಆಹಾರವನ್ನು ಸ್ವೀಕರಿಸುವುದಿಲ್ಲ ಎಂಬ ನೇಮ ಹೊಂದಿದ್ದ ವಸುಧೀಶನು ಲಿಂಗದ ಗುಡಿ ಸಿಗದೆ ಬಳಲಿ ಬೆಂಡಾದಾಗ ಗುರು ಬಸವಣ್ಣನವರ ದರ್ಶನವಾಗುವುದು. "ನೀನು ಹುಡುಕಿಕೊಂಡು ಹೋಗುವ ದೇವರು ಬೇಡ. ನಿನ್ನೊಡನೆಯೇ ಇದ್ದು ಪೂಜೆಗೊಳ್ಳುವ ದೇವರನ್ನು ಕೊಡುತ್ತೇನೆ." ಎಂದು ಗುರು ಬಸವಣ್ಣನವರು ವಸುಧೀಶನಿಗೆ ಅನುಗ್ರಹಿಸುತ್ತಾರೆ. ಇದರಿಂದ ಪ್ರಭಾವಿತನಾಗಿ ವಸುಧೀಶ ತಪಸ್ಸಿಗೆ ಕುಳಿತುಕೊಳ್ಳುತ್ತಾನೆ. ನಂತರ ಅಲ್ಲಿಗೆ ಬಂದ ಅಲ್ಲಮಪ್ರಭುದೇವರು ಅನಿಮಿಷಯ್ಯನ ಕರಸ್ಥಲದಲ್ಲಿದ್ದ ಇಷ್ಟಲಿಂಗವನ್ನು ತೆಗೆದುಕೊಳ್ಳುತ್ತಾರೆ.

ಇದನ್ನೇ ಪ್ರಸ್ತುತ ವಚನದಲ್ಲಿ ಹೇಳಲಾಗಿದೆ. "ಎನ್ನ ಕರಸ್ಥಲದಲ್ಲಿದ್ದ ಲಿಂಗವನು ಅನಿಮಿಷ ತೆಗೆದುಕೊಂಡ. ಅವರ ಕರಸ್ಥಲದಲ್ಲಿದ್ದ ಲಿಂಗವನು ನೀವು ತೆಗೆದುಕೊಂಡಿರಿ ಕೊಟ್ಟ ಅನಿಮಿಷ, ತೆಗೆದುಕೊಂಡ ಅಲ್ಲಮಪ್ರಭು ಇಬ್ಬರ ಚೈತನ್ಯಗಳೂ ಪರಸ್ಪರ ಬೆರೆತು ಬಿಟ್ಟವೆ."

ಮಹಾ ಮಾತೆಯ ಪಾದಕ್ಕೆ ನಮೋ ನಮೋ...

ಚೆನ್ನಮ್ಮಲಾದ್ರಿಯಲಿ ಮಹಾದೇವಿಯಕ್ಕನ ಚಿತ್ಕಳೆಯೊಂದು
ಹತ್ತೊಂಬತ್ತುನೂರಾ ನಲವತ್ತಾರರಲ್ಲಿ
ಧರೆಗೆ ಇಳಿದು ಬಂದಿತ್ತು ನೋಡಾ.
ಓದುವುದು ಸದ್ಗುಣಕ್ಕೆಂದು ತಿಳಿದು
ವಿಜ್ಞಾನ, ತತ್ವಜ್ಞಾನ, ಸ್ನಾತಕೋತ್ತರ ಪದವಿಯ ಪಡೆದು
ಭಕ್ತಿ, ಜ್ಞಾನ, ವೈರಾಗ್ಯ ಮನದಲ್ಲಿ ತಳೆದು
ಮಾಗಿಯ ಕೋಗಿಲೆಯಂತೆ ಮೂಗಿಯಾಗಿ
ಗುರು ಕಾರುಣ್ಯಕ್ಕಾಗಿ ಹಂಬಲಿಸುತ್ತಿದ್ದರು ನೋಡಾ.
ಅದೊಂದು ದಿನ ವಿವೇಕಾನಂದರಿಗೆ ರಾಮಕೃಷ್ಣರು ಸಿಕ್ಕಂತೆ
ಸದ್ಗುರು ಲಿಂಗಾನಂದರ ದರುಶನವಾಯಿತ್ತು ನೋಡಾ.
ಮುಗ್ಧ ಕಂದನ ನೋವು ನಲಿವು ಹೆತ್ತ ತಾಯಿಗೆ ಅರಿವಾಗುವಂತೆ
ಮಾತೆಯ ಅಧ್ಯಾತ್ಮ ಬಯಕೆಯ ಸದ್ಗುರು ಲಿಂಗಾನಂದರು ಅರಿತು,
ಲಿಂಗ ದೀಕ್ಷೆಯ ನೀಡಿ ಗುರು ಗ್ರಂಥವ ಕೈಗಿತ್ತರು ನೋಡಾ.
ಬರಡು ಭೂಮಿಗೆ ಹರಿದು ಹೆದ್ದೊರೆ ಕೆರೆ ತುಂಬಿ ಬಂದಂತೆ
ಗುರು ವಚನವೆಲ್ಲ ಓದಿ ಅನುಭಾವಿಗಳಾದಾಗ,
ಮನಸ್ಸೆಂಬ ಮರ್ಕಟ ಚಂಚಲದಲ್ಲಿ ಓಡಾಡುತ್ತಿತ್ತು ನೋಡಾ.
ಅನುಭಾವದಿಂದೇನು ಉಪಯೋಗವೆಂದು ? ತಿಳಿದು,
ಅಕ್ಕನ ಅವತರಿಸಿಕೊಳ್ಳಬೇಕೆಂದು ಹಗಲಿರುಳು ತಪವಗೈಯುತಿರಲು
ಅದೊಂದು ದಿನ ರಾತ್ರಿ ಕೋಣೆಯ ಕಗ್ಗತ್ತಲು ಹರಿದು
ದಿವ್ಯ ಬೆಳಕೊಂದು ಪ್ರಕಾಶಿಸುತ್ತಿರುವುದು ಕಂಡರು ನೋಡಾ.
"ನಾ ನಿನ್ನೊಳು ಅವತರಿಸುವೆ" ಎಂಬ ಅಕ್ಕನ ನುಡಿ ಕೇಳಿ
"ನೀ ನನ್ನೊಳಿದ್ದ ಕುರುಹೇನು?" ಎಂಬ ಮಾತೆಯ ಪ್ರಶ್ನೆಗೆ
"ಗಾನ ಕೋಗಿಲೆಯಂತೆ ಹಾಡುವೆ, ಮಿಂಚಿನ ಶಕ್ತಿಯಂತೆ ಮಾತಾಡುವೆ,
ಗುರುಬಸವ ಕಟ್ಟಿದ ಕಲ್ಯಾಣರಾಜ್ಯ ಮುನ್ನಡೆಸಿಕೊಂಡು ಹೋಗುವೆ"
ಎಂಬ ನುಡಿ ಕೇಳಿ ಪುಳಕಿತರಾಗಿ ಧರ್ಮಸೂತ್ರವಿಡಿದು
ಜಂಗಮ ದೀಕ್ಷೆಯ ಪಡೆದು ಅಕ್ಕನ ಪೀಠವ ಕಟ್ಟಿ
ಪ್ರಥಮಮಹಿಳಾ ಜಗದ್ಗುರು ಪೀಠವನಲಂಕರಿಸಿದರು ನೋಡಾ.
ಧರ್ಮಪಿತರ ವಚನಗಳ ತಪ್ಪಾಗಿ ಅರ್ಥಯಿಸಿಕೊಳ್ಳುತ್ತಿರುವುದ ಕಂಡು
ಗುರುವಾಜ್ಞೆಯ ಮೇರೆಗೆ, ಗುರುದೇವರ ವಚನಕ್ಕೆ ಚ್ಯುತಿ ಬಾರದಂತೆ,
ಗುರುದೇವರ ವಚನದಲ್ಲೇ ಅಡಗಿರುವ,
"ಲಿಂಗದೇವ"ನೆಂಬ ರತ್ನವ ಹುಡುಕಿ ಹೊರತೆಗೆದರು ನೋಡಾ.
ಗುರುಚೇತನ ಇಳೆಯೊಳಗಿರುವಂತೆ, ಕೊಂಡಿ-ಮಂಚಣ್ಣಾದಿಗಳ
ಚೇತನವು ಇಳೆಯಲ್ಲಿದೆ ಎಂಬುದ ಅಂದೆ ಅರಿತರು ನೋಡಾ.
ವಿರೋಧವೆ ತತ್ವನಿಷ್ಠೆ ಎಂಬ ಅಜ್ಞಾನ ತುಂಬಿಕೊಂಡಿರುವವರು
ಗುರು ವಚನದ ಗಂಧ-ಗಾಳಿ ಗೊತ್ತಿಲ್ಲದ ಜನರನೆಲ್ಲ ಸೇರಿಸಿ
ಮಾತೆಯ ವಿರುದ್ಧ ತಿರುಗಿಬಿದ್ದರು ನೋಡಾ!!

ಅಕ್ಕನ ಅನುಗ್ರಹದಿಂದ ಬರೆದ ತರಂಗಿಣಿ,
ಗುರುದೇವರಿಗೆ ಕಲ್ಯಾಣದಲ್ಲಾದ ಗಡಿಪಾರು, ಹರಳಯ್ಯ, ಮಧುವರಸ,
ಶೀಲವಂತರಿಗೆ ಎಳೆಹೂಟೆ ಮರಣದಂಡನೆ ನೆನೆದು,
ಸತ್ಯಕ್ಕೆ ಸಾವಿರ ಕತ್ತಿಗಳೇಟು ಎಂದರಿತು
ರಣರಂಗದಲ್ಲಿಳಿದು ಹೇಡಿಯಂತೆ ಬೆನ್ನು ತೋರಿಸಿ ಓಡದೆ,
ವೀರ ಯೋಧನಂತೆ ವಿರೋಧವನ್ನೆಲ್ಲ ಎದುರಿಸಿದರು ನೋಡಾ.
ಕಲ್ಯಾಣದಲ್ಲಿ ನಡೆದ ಕ್ರಾಂತಿಯಂತೆ, ಕಲ್ಯಾಣ ಪರ್ವ
ಪಥಸಂಚಲನಕ್ಕೆ ತಡೆಯೊಡ್ಡುತ್ತಿರುವರು ಎಂದು ತಿಳಿದು,
ವಿರೋಧಿಸುತ್ತಿರುವವರಿಗೆ ಎದುರುತ್ತರ ನೀಡದೆ
ಗುರುದೇವರ ಕೀರ್ತಿ ಅಮರವಾಗಿರಲೆಂದು ಕಲ್ಯಾಣದಲ್ಲಿ
ನೂರೆಂಟು ಅಡಿ ಬಸವಪುತ್ಥಳಿಯ ನಿರ್ಮಿಸಿದರು ನೋಡಾ
ನಾಡಿನ ಮೂಲೆ ಮೂಲೆಯಿಂದ ಬಂದ ಶರಣ ಬಳಗವೆಲ್ಲ,
ಗುರುದೇವರ ಮೂರ್ತಿಯ ಕಂಡು, ಮಾತೆಯ ವ್ಯಕ್ತಿತ್ವ ಕೊಂಡಾಡುತಿರಲು
ವಿರೋಧಿಸಿದವರಿಗೆ ನಾಚಿಕೆಯಾಗಿ,
ತಲೆ ಮರೆಸಿಕೊಂಡು ಓಡಾಡುತ್ತಿರುವರು ನೋಡಾ
ಇಂತಹ ಮಹಾ ಮಾತೆಯ ದಿಟ್ಟತನವ ಕಂಡು
ಆನು ಮಹಾ ಮಾತೆಯ ಪಾದಕ್ಕೆ
ನಮೋ ನಮೋ ಎಂದು ಬದುಕಿದೆನು ಕಾಣಾ
ಗುರುಬಸವ ಮಹಾಪ್ರಭು ತಂದೆ.

ಪ್ರಭುಲಿಂಗ.ಎಸ್.ಮಠಪತಿ.ರಾಜಗಿರಾ
ರಾಷ್ಟ್ರೀಯ ಬಸವದಳ, ಬೀದರ. ಫೋ.ನಂ. 9916863414

ಬೆಳ್ಳಿ ನಾಣ್ಯ ಬಿಡುಗಡೆ

25ನೆಯ ಶರಣಮೇಳದ ಸವಿನೆನಪಿಗಾಗಿ 10 ಗ್ರಾಂ ತೂಕದ ಬೆಳ್ಳಿನಾಣ್ಯವನ್ನು ಬಿಡುಗಡೆ ಮಾಡಲಾಗಿದ್ದು ಮುಖ ಬೆಲೆ ರೂ.1000/- ಕೊರಿಯರ್ ಛಾರ್ಜು ರೂ.40/-. ಬೇಕಾದವರು ಮನಿಯಾರ್ಡರ್ ಇಲ್ಲವೇ ಬ್ಯಾಂಕ್ ಡ್ರಾಫ್ಟ್ ಮೂಲಕ ಹಣ ಕಳಿಸಬೇಕು. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಬ್ಯಾಂಕ್ ಡ್ರಾಫ್ಟ್ ತೆಗೆಸುವವರು "ಬಸವ ಧರ್ಮ ಪೀಠ, ಬೆಂಗಳೂರು" ಹೆಸರಿಗೆ ತೆಗೆಸಿ, ಬೆಂಗಳೂರಿನ ಬಸವ ಮಂಟಪದ ವಿಳಾಸಕ್ಕೆ ಕಳಿಸಬೇಕು. ಸಂಪರ್ಕಿಸುವ ದೂರವಾಣಿ : 9663385657.

ಕಲ್ಯಾಣ ಕಿರಣವೇ ಆಹ್ವಾನ ಪತ್ರಿಕೆ

ಶರಣ ಬಂಧುಗಳೇ, ಕಾರ್ಯಕ್ರಮಗಳು ಮೇಲಿಂದ ಮೇಲೆ ಆಗುತ್ತಲಿವೆ. ಭಕ್ತರ ಸಂಖ್ಯೆ ಬೆಳೆಯುತ್ತಲಿದೆ. ಎಲ್ಲರಿಗೂ ಪ್ರತ್ಯೇಕ ಆಹ್ವಾನ ಪತ್ರಿಕೆ ಕಳಿಸಲು ಸಾಧ್ಯವಿಲ್ಲದ ಮಾತಾಗಿದೆ. ಆದ್ದರಿಂದ ಕಲ್ಯಾಣ ಕಿರಣ ಮಾಸ ಪತ್ರಿಕೆಯಲ್ಲಿ ಕೊಟ್ಟ ಮಾಹಿತಿಯನ್ನೇ ನಿಮ್ಮ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಪ್ರತ್ಯೇಕ ಆಹ್ವಾನವನ್ನು ನಿರೀಕ್ಷಿಸದೆ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ. -ಮಾತಾಜಿ

ಜ್ಞಾನ - ಕ್ರಿಯೆ

- ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ

ಅಂತರಂಗದಲ್ಲಿ ಅರಿವಾದಡೆನಯ್ಯಾ ?
ಬಹಿರಂಗದಲ್ಲಿ ಕ್ರಿಯೆಯಿಲ್ಲದನ್ನಕ್ಕ
ದೇಹವಿಲ್ಲದಿದ್ದಡೆ ಪ್ರಾಣಕ್ಕಾಶ್ರಯವುಂಟೆ ?
ಕನ್ನಡಿಯಿಲ್ಲದಿದ್ದಡೆ ತನ್ನ ಮುಖ ಕಾಣಬಹುದೆ ?
ಸಾಕಾರ- ನಿರಾಕಾರ ಏಕೋದೇವ ನಮ್ಮ
ಕೂಡಲ ಚನ್ನ ಸಂಗಯ್ಯನು

-ಚಿನ್ಮಯಜ್ಞಾನಿ ಚನ್ನಬಸವಣ್ಣನವರು.

"ಜ್ಞಾನವೇ ಶಕ್ತಿ" "Knowledge is power" ಎಂಬ ಘೋಷವಾಕ್ಯ ಕೇಳಿದಾಗ ಓದಿದಾಗ ಮೈ ಪುಳಕಗೊಳ್ಳುತ್ತಿತ್ತು. ಇದರಿಂದ ಹೆಚ್ಚು ಹೆಚ್ಚಾಗಿ ಜ್ಞಾನ ಸಂಚಯ ಮಾಡಲು ಮನಸ್ಸು -ಬುದ್ಧಿಗಳು ಹಾತೊರೆಯುತ್ತಿದ್ದುದು ಅಷ್ಟೇ ಸಹಜವಾಗಿತ್ತು.

"ಜ್ಞಾನ ತನ್ನಿಂದ ತಾನೇ ಒಂದು ಶಕ್ತಿಯಲ್ಲ. ಜ್ಞಾನಕ್ಕೆ ಕ್ರಿಯೆ ಅಥವಾ ಆಚಾರ ಬೆರೆಸಿದಾಗ ಮಾತ್ರ ಅದು ಶಕ್ತಿಯಾಗಿ ಪರಿವರ್ತನೆಗೊಂಡು ಬಹಿರಂಗದಲ್ಲಿ ಸತ್ಪರಿಣಾಮ ಬೀರುತ್ತದೆ" ಎಂಬ ಸತ್ಯ ತಿಳಿದು ಬಂದಿದ್ದು ವಚನ ಸಾಹಿತ್ಯ ಸಂಪರ್ಕಕ್ಕೆ ಬಂದ ಮೇಲೆ ಎಂದರೆ ಅತಿಶಯೋಕ್ತಿಯಲ್ಲ.

ಲೌಕಿಕ ಬದುಕಿನಲ್ಲಿ ಜ್ಞಾನ ಸಂಪಾದಿಸಿ ಸಾಧನೆ ಮಾಡಿ ಯಶಸ್ಸು ಗಳಿಸುವುದನ್ನು ನಾವು ಜಗತ್ತಿನಲ್ಲಿ ಸಹಜವಾಗಿ ಕಾಣುತ್ತೇವೆ. ಆದರೆ ಜ್ಞಾನ ಕ್ರಿಯೆಗಳಿಗೆ ಸಂಬಂಧಿಸಿದ ವಚನಗಳನ್ನು ಅಧ್ಯಯನ ಮಾಡಿದಾಗ ಇಂಥ ಲೌಕಿಕ ಜ್ಞಾನದ ಬಗ್ಗೆ ಎಲ್ಲಿಯೂ ಹೇಳಿಲ್ಲ ಎಂಬುದು ಗಮನಾರ್ಹ. ಏಕೆಂದರೆ ಲೌಕಿಕದಲ್ಲಿ ಯಶಸ್ವಿಯಾಗಿ ಬದುಕಲು ಬೇಕಾದ ಜ್ಞಾನವನ್ನು ಪಡೆಯಲು ಅನೇಕ ಸುಲಭ ದಾರಿಗಳಿವೆ ಎಂಬುದು ಸರ್ವವೇದ್ಯ. ಹಾಗಾದರೆ ಬಸವಾದಿ ಪ್ರಮಥರು ಬಲವಾಗಿ ಪ್ರತಿಪಾದಿಸುತ್ತಿರುವ ಜ್ಞಾನ ಕ್ರಿಯೆಗಳ ಸಂಬಂಧ ಯಾವುದು ಎಂಬುದನ್ನು ಈಗ ನೋಡೋಣ.

ಚಿನ್ಮಯಜ್ಞಾನಿ ಎಂದೇ ಪ್ರಕಾಶಿಸುತ್ತಿರುವ ಚನ್ನಬಸವಣ್ಣನವರು ತಮ್ಮ ವಚನದಲ್ಲಿ ಜ್ಞಾನ ಕ್ರಿಯೆಗಳ ಮಹತ್ವವನ್ನು ಈ ರೀತಿ ಮನಗಾಣಿಸುತ್ತಾರೆ. ಅಂತರಂಗದಲ್ಲಿ ಅಪಾರವಾದ ಜ್ಞಾನ ಸಂಪತ್ತನ್ನು ತುಂಬಿಕೊಂಡು ಬಹಿರಂಗದ ನಡೆ-ನುಡಿ, ಆಚಾರ-ವಿಚಾರಗಳಲ್ಲಿ ಆ ಜ್ಞಾನದ ಪ್ರಭೆ-ಸುಳುಹು ವ್ಯಕ್ತವಾಗದಿದ್ದರೆ ಅಂಥ ಜ್ಞಾನ ನಿಷ್ಪ್ರಯೋಜಕ. ಹೀಗೆ ದೇಹವೆಂಬ ಸಾಕಾರರೂಪಿನಲ್ಲಿ ಪ್ರಾಣವೆಂಬ ನಿರಾಕಾರ ಚೈತನ್ಯ ಅಡಗಿ ಬಹಿರಂಗದ ಚಲನವಲನಗಳ ಮೂಲಕ ತನ್ನ ಇರುವಿಕೆಯನ್ನು ಸ್ಪಷ್ಟಪಡಿಸುವುದೋ ಹಾಗೆಯೇ ನಿರಾಕಾರ ತತ್ತ್ವವಾದ ಜ್ಞಾನವು ಬಹಿರಂಗದ ಕ್ರಿಯೆಗಳ ಮೂಲಕ ವ್ಯಕ್ತವಾಗಿ ತನ್ನ ಪ್ರಭೆಯನ್ನು ಹೊರಸೂಸಬೇಕು.

ತನ್ನನ್ನು ತಾನು ನೋಡಿಕೊಳ್ಳಲು ಕನ್ನಡಿಯೆಂಬ ಸಾಧನ ಬೇಕೇ ಬೇಕು. ಅದೇ ರೀತಿ ಅಗೋಚರವಾದ ಪರಮಾತ್ಮನ ಅಂಶವಾದ ಆತ್ಮ ಚೈತನ್ಯವನ್ನು ನೋಡಿ ಆನಂದಿಸಿ ಪೂಜಿಸಿ, ಅನುಭವಿಸಲು ಬಹಿರಂಗದಲ್ಲಿ ಇಷ್ಟಲಿಂಗವೆಂಬ ಲಿಂಗದರ್ಪಣ ಸಾಧಕನಿಗೆ ಬೇಕು. ಏಕೆಂದರೆ ಸೃಷ್ಟಿಕರ್ತನಾದ ಲಿಂಗದೇವನು ವ್ಯಕ್ತನೂ ಹೌದು, ಅವ್ಯಕ್ತನು ಹೌದು. ನಿರಾಕಾರನೂ, ಸಾಕಾರನೂ ಆದ ಪರಮಾತ್ಮನನ್ನು ಜ್ಞಾನ ಕ್ರಿಯೆಗಳ ಸಂಯೋಗದಿಂದ ಮಾತ್ರ ಅರಿತು ಆನಂದಿಸಲು ಅನುಭವಿಸಲು ಸಾಧ್ಯ ಎಂದು ಚನ್ನಬಸವಣ್ಣನವರು ಮನಗಾಣಿಸುತ್ತಿದ್ದಾರೆ.

ಚನ್ನಬಸವಣ್ಣನವರು ಪ್ರತಿಪಾದಿಸುತ್ತಿರುವ ಜ್ಞಾನ ಕ್ರಿಯೆಗಳ ಸಂಬಂಧಕ್ಕೆ ಮತ್ತಷ್ಟು ಪುಷ್ಟಿ ಕೊಡಲು ಶರಣರಾದ ಅಮುಗಿ ದೇವಯ್ಯನವರು ಜ್ಞಾನ ಕ್ರಿಯಗಳಿಲ್ಲದೆ ಸಾಧನೆ ಸಿದ್ಧಿಗಳು ವ್ಯರ್ಥ. ಪರಿಶ್ರಮವನ್ನು ಲೌಕಿಕ ಉಪಮೆಗಳ ಮೂಲಕ ತಿಳಿ ಹೇಳುತ್ತಿದ್ದಾರೆ.

ಜ್ಞಾನದಲ್ಲಿ ಅರಿದಡೇನಯ್ಯ ಕ್ರಿಯೆಯಲ್ಲಿ ಆಚರಿಸದನ್ನಕ್ಕ
ನೆನೆದ ಮಾತ್ರದಲಹುದೇ, ಕ್ರಿಯಾವಂತಿಕೆಯಲ್ಲಲ್ಲದೆ !

ಕುರುಡ ಕಾಣ ಪಥವ, ಹೆಳವ ನಡೆಯಲರಿಯ !
ಒಂದಿಲ್ಲದಿರ್ದೊಡೆ ಒಂದಾಗದು, ಕಾರ್ಯ ಕೈಗೂಡದು,
ಜ್ಞಾನವಿಲ್ಲದ ಕ್ರೀವಂತ ಜಡನು
ಕ್ರಿಯೆಯಿಲ್ಲದ ಜ್ಞಾನ ವಾಗ್ಜಾಲ, ಭ್ರಾಂತು
ಸಿದ್ಧಸೋಮನಾಥಲಿಂಗವನರಿವಡೆ ಎರಡೂ ಬೇಕು.

-ಅಮುಗಿದೇವಯ್ಯ

ಗ್ರಂಥಗಳಿಂದ ಜ್ಞಾನ ಸಂಗ್ರಹ ಮಾಡಿ ಸಾಕಷ್ಟು ತಿಳುವಳಿಕೆ ಪಡೆದರೇನಂತೆ. ಹಾಗೆ ಪಡೆದ ಅರಿವನ್ನು ಆಚರಣೆಗೆ ತರದಿದ್ದಲ್ಲಿ? ಮನಸ್ಸಿನಲ್ಲಿ ಆಗಬೇಕಾದ ಕೆಲಸ ಕಾರ್ಯಗಳನ್ನು ನೆನಪು ಮಾಡಿಕೊಂಡ ಮಾತ್ರಕ್ಕೆ ಸಂಕಲ್ಪಗಳು ಕನಸುಗಳು ಈಡೇರುವುದಿಲ್ಲ. ಅವುಗಳನ್ನು ಕಾರ್ಯ ರೂಪಕ್ಕೆ ಇಳಿಸಲೇಬೇಕು. ಹೇಗೆಂದರೆ ಕಾಲಿದ್ದು ಕಣ್ಣಿಲ್ಲದ ಕುರುಡನಿಗೆ ಸುರಕ್ಷಿತವಾಗಿ ದಾರಿಯಲ್ಲಿ ಸಾಗಿ ಗುರಿ ತಲುಪಲು ದಾರಿ ಕಾಣುವುದಿಲ್ಲವೋ, ಅದರಂತೆ ಕಣ್ಣಿದ್ದು ಕಾಲಿಲ್ಲದ ಕುಂಟನಿಗೆ ಹೇಗೆ ದಾರಿ ಸಾಗದೋ, ಅಂದರೆ ಕಣ್ಣು-ಕಾಲು ಎರಡರಲ್ಲಿ ಒಂದಿಲ್ಲದಿದ್ದರೂ ಕೆಲಸ ಸಾಗದು ಗುರಿ ಮುಟ್ಟದು. ಹಾಗೆಯೇ ಜ್ಞಾನವೆಂಬ ಕಣ್ಣಿಲ್ಲದ ಕ್ರಿಯಾಶೀಲನು ಅಜ್ಞಾನದಿಂದ ಆಲಸಿಯಾಗುತ್ತಾನೆ. ಕೆಲಸ ಸಾಧನೆಯ ಮಹತ್ವ ತಿಳಿಯದೆ ನಿಷ್ಕ್ರೀಯನಾಗುತ್ತಾನೆ. ಹಾಗೇಯೇ ಸಾಧನೆ ಸಿದ್ಧಿಯಿಲ್ಲದ ಜ್ಞಾನಿಯ ಮಾತುಗಳು ಶಬ್ದಾಡಂಬರ ಮತ್ತು ಭ್ರಾಂತಿಯಿಂದ ಕೂಡಿ ಕ್ಷಣಿಕ ಮನರಂಜನೆ ಒದಗಿಸಲು ಯೋಗ್ಯವಾಗುತ್ತದೆ. ಸುರಕ್ಷಿತವಾಗಿ ದಾರಿಯಲ್ಲಿ ಸಾಗಿ ಗುರಿ ಮುಟ್ಟಲು ವ್ಯಕ್ತಿಗೆ ಹೇಗೆ ಕಣ್ಣು ಕಾಲು ಎರಡೂ ಬೇಕೋ ಹಾಗೆಯೇ ಪರಮಾತ್ಮನನ್ನು ಅರಿತು ಆನಂದಿಸಿ ಪೂಜಿಸಿ ಅನುಭವಿಸಲು ಜ್ಞಾನ ಕ್ರಿಯೆ ಎರಡೂ ಬೇಕು. ಇವುಗಳಲ್ಲಿ ಒಂದಿಲ್ಲದಿದ್ದರೂ ಅವನನ್ನು ಅರಿಯುವುದು ಅಸಾಧ್ಯ ಎಂಬ ಆಧ್ಯಾತ್ಮಿಕ ಸತ್ಯವನ್ನು ಎತ್ತಿ ಹಿಡಿದಿದ್ದಾರೆ.

ಷಣ್ಮುಖ ಶಿವಯೋಗಿಗಳು ತಮ್ಮ ಈ ವಚನದಲ್ಲಿ ಸುಜ್ಞಾನ ಸತ್ಕ್ರಿಯೆಗಳ ಮೂಲ ಸತ್ವವನ್ನು ಸರಳ ಸುಂದರವಾಗಿ ಪ್ರತಿಬಿಂಬಿಸುತ್ತಾರೆ.

ಕ್ರಿಯೆಯೆ ಅಧಿಕವೆಂಬ ಗೊಡ್ಡ ಸಿದ್ಧಾಂತಿಗಳ ಮಾತು ಸೊಗಸದಯ್ಯ ಎನಗೆ
ಜ್ಞಾನವೇ ಅಧಿಕವೆಂಬ ದಡ್ಡ ವೇದಾಂತಿಗಳ ಮಾತು ಸೊಗಸದಯ್ಯ ಎನಗೆ
ಅದೇನು ಕಾರಣವೆಂದಡೆ ಆವುದಾನೊಂದು ಪಕ್ಷಿ
ಉಭಯ ರಕ್ಕೆಗಳಿಂದ ಗಗನಕ್ಕೆ ಹಾರುವಂತೆ
ಅಂತರಂಗದಲ್ಲಿ ಸಮ್ಯಕ್ ಜ್ಞಾನ, ಬಹಿರಂಗದಲ್ಲಿ
ಸತ್ ಕ್ರಿಯಾಚರಣೆ ಸನ್ನಿಹಿತವಿಲ್ಲದೆ ಪರವಸ್ತುವ ಕೂಡಬಾರದು
ಇದು ಕಾರಣ ಸತ್ಕ್ರಿಯಾ ಸಮ್ಯಕ್ ಜ್ಞಾನ ಸಂಪನ್ನರಾದ
ಮಹಾಶರಣರ ಪಾದವ ತೋರಿ ಬದುಕಿಸಯ್ಯಾ ಅಖಂಡೇಶ್ವರಾ

ಕ್ರಿಯೆಯೆ ಅಧಿಕ ಎಂದರೆ ಜ್ಞಾನಕ್ಕಿಂತ ಕ್ರಿಯೆಯೆ ಶ್ರೇಷ್ಠ ಎಂದು ವಾದಿಸುವ ಜನ ಸಿದ್ಧಾಂತಿಗಳ ಮಾತುಗಳಲ್ಲಿ ಯಾವುದೇ ಹುರುಳಿಲ್ಲ. ಅದರಂತೆ ಕ್ರಿಯೆಗಿಂತಲೂ ಜ್ಞಾನವೇ ಶ್ರೇಷ್ಠ ಎಂದು ವಾದಿಸುವ ತರ್ಕಿಸುವ ಅಜ್ಞಾನಿ ವೇದಾಂತಿಗಳ ಮಾತುಗಳೂ ನನಗೆ ರುಚಿಸುವುದಿಲ್ಲ. ಏಕೆಂದರೆ ಯಾವ ಪಕ್ಷಿಯಾದರೂ ತನ್ನ ಎರಡೂ ರೆಕ್ಕೆಗಳಿಂದ ಆಕಾಶಕ್ಕೆ ಹಾರುವಂತೆ ಅಂಗರಂಗದಲ್ಲಿರುವ ಸುಜ್ಞಾನ ಬಹಿರಂಗದಲ್ಲಿ ಸತ್ಕ್ರಿಯೆ ಇವೆರಡರ ಸನ್ನಿಹಿತ, ಸಾನಿಧ್ಯದಿಂದ ಮಾತ್ರ ಪರಮಾತ್ಮನನ್ನು ಬೆರೆಸಲು ಕೂಡಲು ಸಾಧ್ಯ. ಇಂಥ ಸುಜ್ಞಾನ ಸತ್ಕ್ರಿಯೆಗಳಿಂದ ಕೂಡಿ ಸಂಪನ್ನರಾದ ಮಹಾ ಶರಣರ ಪಾದವನ್ನು ತೋರಿಸಿ ದರ್ಶನಮಾಡಿಸಿ ನನ್ನ ಬದುಕನ್ನು ಸಾರ್ಥಕಗೊಳಿಸು ಎಂದು ಪ್ರಾರ್ಥಿಸುವ ಮೂಲಕ ಸುಜ್ಞಾನ ಸತ್ಕ್ರಿಯೆಗಳ ಶ್ರೇಷ್ಠತೆಯನ್ನು ಇಲ್ಲಿ ಎತ್ತಿ ಹಿಡಿದಿದ್ದಾರೆ.

ವಚನಗಳಲ್ಲಿ ಉಲ್ಲೇಖಗೊಂಡಂತೆ ಸುಜ್ಞಾನ, ಸತ್ಕ್ರಿಯೆಗಳ ಸಂಪನ್ನತೆಗಳ ದಿವ್ಯ ಸಂಗಮವಾಗಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ತಾಯಿಯವರ ಅನುಭವಾಮೃತದಲ್ಲಿ ಲಿಂಗದೇವನು ಸುಜ್ಞಾನದ ಮಾನದಂಡವಾಗಿ ಪ್ರಕಾಶಿಸುತ್ತಿದ್ದಾನೆ ಎಂಬುದನ್ನು ನಾವೆಲ್ಲರೂ ಮನಗಾಣೋಣ.

ಓಂ ಶ್ರೀ ಗುರು ಬಸವ ಲಿಂಗಾಯ ನಮ:

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2013 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ತಾರನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ
ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2013ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 26ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾ ಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2013 ನೆಯ ಇಸವಿಯ 26ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು
12-09-2012

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
1.	01-11-2012	ಪ್ರಭು(ಗುರು)ವಾರ	ವಿಜಯಪುರ
2.	02-11-2012	ಮಾತೃ(ಶುಕ್ರ)ವಾರ	ಹೊಸಕೋಟೆ
3.	03-11-2012	ಶರಣ(ಶನಿ)ವಾರ	ಸುತ್ತಮುತ್ತ
4.	04-11-2012	ದೇವ(ಭಾನು)ವಾರ	ಸುತ್ತಮುತ್ತ
5.	05-11-2012	ಶಿವ (ಸೋಮ)ವಾರ	ಚಿಕ್ಕಮಗಳೂರು
6.	06-11-2012	ಬಸವ (ಮಂಗಳ)ವಾರ	ಚಿಕ್ಕಮಗಳೂರು
7.	07-11-2012	ಚೆನ್ನ (ಬುಧ)ವಾರ	ಚಿಕ್ಕಮಗಳೂರು

8.	08-11-2012	ಪ್ರಭು (ಗುರು)ವಾರ	ಚಿಕ್ಕಮಗಳೂರು
9.	09-11-2012	ಮಾತೃ (ಶುಕ್ರ)ವಾರ	ಚಿಕ್ಕಮಗಳೂರು
10.	10-11-2012	ಶರಣ (ಶನಿ)ವಾರ	ಭದ್ರಾವತಿ
11.	11-11-2012	ದೇವ(ಭಾನು)ವಾರ	ಭದ್ರಾವತಿ
12.	12-11-2012	ಶಿವ(ಸೋಮ)ವಾರ	ಶಿವಮೊಗ್ಗ
13.	13-11-2012	ಬಸವ(ಮಂಗಳ)ವಾರ	ಕೊಮ್ಮನಾಳ
14.	14-11-2012	ಚನ್ನ (ಬುಧ)ವಾರ	ದಾವಣಗೆರೆ
15.	15-11-2012	ಪ್ರಭು(ಗುರು)ವಾರ	ಚಿತ್ರದುರ್ಗ
16.	16-11-2012	ಮಾತೃ (ಶುಕ್ರ)ವಾರ	ಚಳ್ಳಕೆರೆ
17.	17-11-2012	ಶರಣ (ಶನಿ)ವಾರ	ದೊಡ್ಡ ಉಳ್ಳಾರ್ತಿ
18.	18-11-2012	ದೇವ (ಭಾನು)ವಾರ	ಚಿತ್ರನಾಯಕನ ಹಳ್ಳಿ
19.	19-11-2012	ಶಿವ (ಸೋಮ)ವಾರ	ಘಟಪರ್ತಿ
20.	20-11-2012	ಬಸವ (ಮಂಗಳ)ವಾರ	ಕೋಡಲ್
21.	21-11-2012	ಚನ್ನ (ಬುಧ)ವಾರ	ಬಳ್ಳಾರಿ
22 .	22-11-2012	ಪ್ರಭು(ಗುರು)ವಾರ	ಬಳ್ಳಾರಿ
23.	23-11-2012	ಮಾತೃ(ಶುಕ್ರ)ವಾರ	ಶಿರುಗುಪ್ಪ
24.	24-11-2012	ಶರಣ(ಶನಿ)ವಾರ	ಅಸ್ಕಿಹಾಳ
25.	25-11-2012	ದೇವ(ಭಾನು)ವಾರ	ಗಂಗಾವತಿ
26.	26-11-2012	ಶಿವ (ಸೋಮ)ವಾರ	ಕೊಪ್ಪಳ
27.	27-11-2012	ಬಸವ (ಮಂಗಳ)ವಾರ	ಕೊಪ್ಪಳ
28.	28-11-2012	ಚನ್ನ (ಬುಧ)ವಾರ	ಕೊಪ್ಪಳ
29.	29-11-2012	ಪ್ರಭು(ಗುರು)ವಾರ	ಕೊಪ್ಪಳ
30.	30-11-2012	ಮಾತೃ(ಶುಕ್ರ)ವಾರ	ಹುಬ್ಬಳ್ಳಿ
31.	01-12-2012	ಶರಣ (ಶನಿ)ವಾರ	ಧಾರವಾಡ
32.	02-12-2012	ದೇವ(ಭಾನು)ವಾರ	ಮುಮ್ಮಿಗಟ್ಟಿ
33.	03-12-2012	ಶಿವ (ಸೋಮ)ವಾರ	ಅವರಾದಿ
34.	04-12-2012	ಬಸವ(ಮಂಗಳ)ವಾರ	ಅವರಾದಿ
35.	05-12-2012	ಚನ್ನ(ಬುಧ)ವಾರ	ಅವರಾದಿ
36.	06-12-2012	ಪ್ರಭು (ಗುರು)ವಾರ	ಸವದತ್ತಿ
37.	07-12-2012	ಮಾತೃ (ಶುಕ್ರ)ವಾರ	ಬೈಲಹೊಂಗಲ
38.	08-12-2012	ಶರಣ(ಶನಿ)ವಾರ	ಬೈಲಹೊಂಗಲ
39.	09-12-2012	ದೇವ(ರವಿ)ವಾರ	ಬೆಳಗಾವಿ
40.	10-12-2012	ಶಿವ(ಸೋಮ)ವಾರ	ಬೆಳಗಾವಿ

41.	11-12-2012	ಬಸವ (ಮಂಗಳ)ವಾರ	ಸಂಕೇಶ್ವರ
42.	12-12-2012	ಚನ್ನ (ಬುಧ)ವಾರ	ಗಡಿಹಿಂಗ್ಲಾಜ್
43.	13-12-2012	ಪ್ರಭು(ಗುರು)ವಾರ	ಗೋಕಾಕ್
44.	14-12-2012	ಮಾತೃ (ಶುಕ್ರ)ವಾರ	ಗೋಕಾಕ್
45.	15-12-2012	ಶರಣ (ಶನಿ)ವಾರ	ಗೋಕಾಕ್
46.	16-12-2012	ದೇವ(ಭಾನು)ವಾರ	ಗೋಕಾಕ್
47.	17-12-2012	ಶಿವ (ಸೋಮ)ವಾರ	ಶೇಗುಣಸಿ
48.	18-12-2012	ಬಸವ (ಮಂಗಳ)ವಾರ	ಖಿಪಟಕೊಪ್ಪ
49.	19-12-2012	ಚನ್ನ (ಬುಧ)ವಾರ	ತಾಂವಶಿ
50.	20-12-2012	ಪ್ರಭು(ಗುರು)ವಾರ	ಅಥಣಿ
51.	21-12-2012	ಮಾತೃ(ಶುಕ್ರ)ವಾರ	ಕನಮಡಿ
52.	22-12-2012	ಶರಣ(ಶನಿ)ವಾರ	ಕನಮಡಿ
53.	23-12-2012	ದೇವ (ಭಾನು)ವಾರ	ಚಡಚಣ
54.	24-12-2012	ಶಿವ (ಸೋಮ)ವಾರ	ಬಿಜಾಪುರ
55.	25-12-2012	ಬಸವ (ಮಂಗಳ)ವಾರ	ಗುಲಬರ್ಗಾ (ಬ.ಮಂಟಪ ನೃಪತುಂಗ ಕಾಲನಿ ಸಂಜೆ-6)
56.	26-12-2012	ಚನ್ನ (ಬುಧ)ವಾರ	ಗುಲಬರ್ಗಾ(ಬ.ಮಂಟಪ ಮಹಾಂತನಗರ)
57.	27-12-2012	ಪ್ರಭು(ಗುರು)ವಾರ	ಯಲಮಾಮಿಡಿ
58.	28-12-2012	ಮಾತೃ (ಶುಕ್ರ)ವಾರ	ಉದಗೀರ
59.	29-12-2012	ಶರಣ(ಶನಿ)ವಾರ	ಬೀದರ
60.	30-12-2012	ದೇವ (ಭಾನು)ವಾರ	ಕೋಳಾರ (ಕೆ)
61.	31-12-2012	ಶಿವ (ಸೋಮ)ವಾರ	ಜಹಿರಾಬಾದ್
62.	01-01-2013	ಬಸವ(ಮಂಗಳ)ವಾರ	ಹೈದ್ರಾಬಾದ್
63.	02-01-2013	ಚನ್ನ (ಬುಧ)ವಾರ	ಹೈದ್ರಾಬಾದ್
64.	03-01-2013	ಪ್ರಭು(ಗುರು)ವಾರ	ಹೈದ್ರಾಬಾದ್
65.	04-01-2013	ಮಾತೃ(ಶುಕ್ರ)ವಾರ	ಹೈದ್ರಾಬಾದ್
66.	05-01-2013	ಶರಣ (ಶನಿ)ವಾರ	ಹೈದ್ರಾಬಾದ್
67.	06-01-2013	ದೇವ (ಭಾನು)ವಾರ	ಹೈದ್ರಾಬಾದ್
70.	07-01-2013	ಶಿವ (ಸೋಮ)ವಾರ	ಹೈದ್ರಾಬಾದ್
71.	08-01-2013	ಬಸವ (ಮಂಗಳ)ವಾರ	ಹೈದ್ರಾಬಾದ್
72.	09-01-2013	ಚನ್ನ (ಬುಧ)ವಾರ	ಹೈದ್ರಾಬಾದ್
73.	10-01-2013	ಪ್ರಭು(ಗುರು)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

ಮಲೆ ಮಾದೇಶ್ವರ ಬೆಟ್ಟದಲ್ಲಿ ವೈದಿಕೀಕರಣದ ಸಂಚು

ಮಾದೇಶ್ವರ ಬೆಟ್ಟವು ಕರ್ನಾಟಕದ ದಕ್ಷಿಣ ಭಾಗದ ಪೂರ್ವ ಘಟ್ಟಗಳ ಮಧ್ಯದಲ್ಲಿ, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಿಂದ ೮೦ ಕಿಲೊಮೀಟರು ದೂರದಲ್ಲಿರುವ ಶ್ರೀ ಮಾದೇಶ್ವರರ ಕ್ಷೇತ್ರ. ಮಾದೇಶ್ವರರು ಲಿಂಗೈಕ್ಯವಾಗಿರುವ ಸ್ಥಾನವಾದ ಗದ್ದುಗೆ ಇರುವ ಜಂಗಮಕ್ಷೇತ್ರ. ಅದು ಮಾದೇಶ್ವರರ ತಪೋನುಷ್ಠಾನಗಳಿಂದ ಪಾವನವಾದ ಮಹಾಕ್ಷೇತ್ರವೆಂದು ಪರಿಗಣಿತವಾದ ಜಾಗೃತಸ್ಥಾನ. ಅಂತಹ ಕ್ಷೇತ್ರದಲ್ಲಿ ಮದ್ಯಪಾನ, ಮಾಂಸಾಹಾರ, ಪ್ರಾಣಿಬಲಿ, ಅನೈತಿಕ ಚಟುವಟಿಕೆಗಳು ನಿಷಿದ್ಧ.

ಸುಮಾರು ೧೫ನೆಯ ಶತಮಾನದ ಮಲೆ ಮಾದೇಶ್ವರರು ಬಸವ ಪಥದಲ್ಲಿ ನಡೆದ ಶುದ್ಧ ಶರಣಮಾರ್ಗಿಗಳೂ, ಕ್ರಾಂತಿಕಾರಿ ಧರ್ಮಪ್ರಸಾರಕರೂ, ವೈರಾಗ್ಯಸಂಪನ್ನರೂ, ಕನ್ನಡಿಗರೂ, ಏಕದೇವೋಪಾಸಕರೂ, ಮಹಾಮಹಿಮರೂ, ಐತಿಹಾಸಿಕ ಮಹಾಪುರುಷರೂ ಆಗಿದ್ದಾರೆ. ಅಲ್ಲಮಪ್ರಭುದೇವ, ಚೆನ್ನಬಸವಣ್ಣ, ಸಿದ್ಧರಾಮ, ಅನಾದಿಗಣನಾಥ, ಆದಿಗಣೇಶ್ವರರಂತಹ ಉಜ್ವಲ ಗುರುಪರಂಪರೆಯನ್ನು, ನಿರಂಜನಸ್ವಾಮಿ, ಜ್ಞಾನಾನಂದಸ್ವಾಮಿಗಳಂತಹ ಶಿಷ್ಯ ಪರಂಪರೆಯನ್ನೂ ಹೊಂದಿದವರು.

ಮಾದೇಶ್ವರರು ಶ್ರೀಶೈಲದ ಕಡೆಯಿಂದ ಬಂದು, ಸುತ್ತೂರಿನಲ್ಲಿದ್ದು, ಕುಂತೂರಿಗೆ ಬಂದಾಗ, ಗುರು ಬಸವಣ್ಣನವರು ಸ್ಥಾಪಿಸಿ, ಅಲ್ಲಮಪ್ರಭುದೇವರ ಅಧ್ಯಕ್ಷತೆಯಿಂದ ಪ್ರಾರಂಭವಾದ, ಶೂನ್ಯಪೀಠದ ಆರನೆಯ ಜಗದ್ಗುರುವಾಗಿ ಅಧಿಕಾರ ಹೊಂದಿದರು. ನಂತರ ಧರ್ಮಪ್ರಸಾರ ಕಾರ್ಯವನ್ನು ಮುಂದುವರಿಸಲು ಶೂನ್ಯಪೀಠದ ಅಧಿಕಾರವನ್ನು ಏಳನೆಯ ಜಗದ್ಗುರು ನಿರಂಜನಸ್ವಾಮಿಯವರಿಗೆ ಅನುಗ್ರಹಿಸಿ, ಶಿಷ್ಯ ಸಂಗಪ್ಪನವರ ಜತೆ, ಏಳು ಮಲೆಯ ಮಧ್ಯದ ನಡುಮಲೆಗೆ ಬಂದರು. ಅಲ್ಲಿ ಧ್ಯಾನ, ತಪಸ್ಸು ಮಾಡಿ, ಆ ಕಾಡು ಜನರಿಗೆ ಅಹಿಂಸಾ ತತ್ವ ಹೇಳಿ, ಕೃಷಿ ಕಾಯಕ ಕಲಿಸಿ, ಅವರನ್ನು ಸಸ್ಯಾಹಾರಿಗಳನ್ನಾಗಿ ಪರಿವರ್ತಿಸಿ, ಅವರ ಉದ್ಧಾರಕ್ಕಾಗಿ ಸಾಲೂರು ಮಠ ಸ್ಥಾಪಿಸಿ, ದಾಸೋಹ ನಡೆಯಿಸಿ, ದೇವರನ್ನು ಶರಣರು ಲಿಂಗ ಎಂದು ಕರೆದಿರುವುದನ್ನು ತಿಳಿಸಿ, ಅಷ್ಟಾವರಣ, ಪಂಚಾಚಾರ, ಷಟಸ್ಥಲ ಮುಂತಾದ ಲಿಂಗಾಯತ ಧರ್ಮ ತತ್ವಗಳನ್ನು ಉಪದೇಶಿಸಿ, ಉದ್ಯೋಗ-ಜಾತಿ-ಲಿಂಗ ಭೇದಗಳಿಲ್ಲದೆ ಸೋಲಿಗರು, ಕುರುಬರು, ಬೇಡರಿಗೆಲ್ಲ ಲಿಂಗಧಾರಣೆ ಮಾಡಿಸಿ ಧರ್ಮಸಂಸ್ಕಾರದ ಹಕ್ಕನ್ನು ಕೊಟ್ಟ ಮಹಾತ್ಮರು.

ಆಗ ಈ ಭಾಗಕ್ಕೆ 'ಬೇಡಗಂಪಣ' ರಾಜ್ಯ ಎಂಬ ಹೆಸರಿತ್ತು. ಅದಕ್ಕೆ ರಾಯಣ್ಣ ರಾಜ. ಆಲಂಬಾಡಿ ಅದರ ರಾಜಧಾನಿ. ರಾಯಣ್ಣನ ಮಗಳು ದೇವಕಿ ಅತ್ಯಂತ ಸುಂದರಿ. ಅವಳನ್ನು ಬಯಸಿ ತಮಿಳುನಾಡಿನ ರಾಜನೊಬ್ಬನು ಬರಲು, ಮಾದೇಶ್ವರರ ದಿವ್ಯ ಕೃಪೆಯಿಂದ ರಾಯಣ್ಣನು ಕೊಂಗರ ಸೈನ್ಯವನ್ನು ಹಿಮ್ಮೆಟ್ಟಿಸಿ, ದೇವಕಿಯನ್ನು ರಕ್ಷಿಸಿದನು. ಈ ಜಯವು ಮಾದೇಶ್ವರರ ಮಹಿಮೆಯನ್ನು ಇನ್ನೂ ಹೆಚ್ಚಿಸಿತು. ದೇವಸ್ಥಾನದ ಸ್ವಲ್ಪ ದೂರದಲ್ಲಿ ದೇವರಪುರ ಗ್ರಾಮವಿದ್ದು, ಅಲ್ಲಿ ತಮ್ಮಡಿಗಳು ವಾಸವಾಗಿದ್ದು, ಅವರೆಲ್ಲರೂ ಲಿಂಗಾಯತರಾಗಿದ್ದಾರೆ. ದೇವಸ್ಥಾನವು ಕೆಲವು ಶತಮಾನಗಳು ಸಾಲೂರು ಮಠದ ಸ್ವಾಮಿಗಳು ಮತ್ತು ದೇವಸ್ಥಾನದ ತಮ್ಮಡಿಗಳ ವಶದಲ್ಲಿತ್ತು.

ಮಾದೇಶ್ವರರ ಗದ್ದಿಗೆ ಶೈವಮಯವಾಗಿದೆ. ಅದರ ಸುತ್ತಲೂ ಒಂದು ಕಲ್ಲುಗೋಡೆ ಮಾತ್ರ ಇತ್ತೆಂದು, ಆಲಂಬಾಡಿ ಜುಂಜೇಗೌಡ ಗರ್ಭಗುಡಿ ಕಟ್ಟಿಸಿದರೆಂದು, ಬಂಡಳ್ಳಿಯ ಆಚಾರಿ ಮಾದೇಶ್ವರ ಲಿಂಗದ ಮುಂದೆ ವೃಷಭನನ್ನು ಸ್ಥಾಪಿಸಿದರೆಂದು ಡಾ.ಬಿ.ಶಿವಮೂರ್ತಿಶಾಸ್ತ್ರಿಯವರು ಬರೆದ 'ಶ್ರೀ ಮಾದೇಶ್ವರ ಚರಿತ್ರೆ' ಎಂಬ ಪುಸ್ತಕದಲ್ಲಿ ಹೇಳಿದೆ. 'ವೃಷಭ' ಎಂದರೆ ಎತ್ತು ಎಂಬ ಅರ್ಥವಿದ್ದು, ಎತ್ತು ಸಾಮಾನ್ಯ ಮಾನವನಿಗಿಂತಲೂ ಕೆಳಗಿನ ಸ್ತರದಲ್ಲಿರುವ ಜೀವಿ. ಪ್ರಾಣಿ ಪೂಜೆಯು ಲಿಂಗಾಯತ ಧರ್ಮದಲ್ಲಿ ವರ್ಜ್ಯ. ಮಾದೇಶ್ವರರ ಗದ್ದುಗೆಯಲ್ಲಿ ನಾಲ್ಕು ಕಾಲಿನ ಎರಡು ಕೊಂಬಿನ ಒಂದು ಬಾಲದ ನಂದಿಯನ್ನು ಕೂರಿಸಿರುವುದು ಅವರಿಗೆ ಮಾಡುವ ಅಪಚಾರ. ಮಾದೇಶ್ವರರು ಮಹಾತ್ಮರಾದರೆ ಎತ್ತು ವಿಚಾರಶೂನ್ಯ ಮೂಕ ಪ್ರಾಣಿ. ಮಾದೇಶ್ವರರು ಐತಿಹಾಸಿಕ ವ್ಯಕ್ತಿ ಎಂಬುದನ್ನು ತಿಳಿಯದೆ, ಮಾದೇಶ್ವರ ಪರಂಪರೆಯನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡದೆ, ದೇವಸ್ಥಾನಗಳಲ್ಲಿ ಸ್ಥಾಪಿಸುವಂಥ ಪೌರಾಣಿಕ ಹಿನ್ನೆಲೆಯ ವೃಷಭನನ್ನು ಶರಣ ಪರಂಪರೆಯ ಮಾದೇಶ್ವರರ ಗದ್ದುಗೆಯಲ್ಲಿ ಸ್ಥಾಪಿಸಿರುವುದು ಸರಿಯಲ್ಲ.

ಮಾದೇಶ್ವರರ ಗದ್ದಿಗೆ ವೈದಿಕಮಯವಾಗಿದೆ. ಮಾದೇಶ್ವರರು ತಮ್ಮ ವ್ಯಕ್ತಿತ್ವದಿಂದ ಜನರನ್ನು ಆಕರ್ಷಿಸಿ, ಆಧ್ಯಾತ್ಮಿಕ ಜೀವನದ ಶಿಕ್ಷಣ ನೀಡಿದರೇ ಹೊರತು ದೇವಸ್ಥಾನ ಕಟ್ಟಿಸಲಿಲ್ಲ, ವಿಗ್ರಹ ನಿಲ್ಲಿಸಲಿಲ್ಲ. ದೇಹವೇ ದೇವಾಲಯವಾಯಿತು. ಇಂಥ ದೇವನಿರ್ಮಿತ ಚೈತನ್ಯವುಳ್ಳ ದೇಹದೇವಾಲಯವನ್ನು ಬಿಟ್ಟು ಮಾನವ ನಿರ್ಮಿತ ಜಡವಾದ ಕ್ಷೇತ್ರದೇವಾಲಯಕ್ಕೆ ಹೋಗುವ ಹಂಗು ಅವರಿಗೆ ಇಲ್ಲವಾಯಿತು. ಆದರೆ ಮಾದೇಶ್ವರರ ಗದ್ದಿಗೆಯನ್ನು ದೇವಸ್ಥಾನೀಕರಿಸಿ, ವೃಷಭ ಸ್ಥಾಪಿಸಿ, ಗೋಪುರಗಳನ್ನು ನಿರ್ಮಿಸಿ, ಮೂರ್ತಿಗಳನ್ನು ಕೂರಿಸಿ, ದೇವಾಲಯದ ಪಶ್ಚಿಮದಲ್ಲೂ ಗೋಪುರ, ಮಹಾದ್ವಾರ, ಸ್ತಂಭಗಳನ್ನು ವಾಸ್ತುವಿನ ದೋಷ ನಿವಾರಣೆಗೆಂದು ನಿರ್ಮಿಸಿರುವುದರಿಂದ ಬಹುಪಾಲು ಜನರು ಮಾದೇಶ್ವರ ಎಂದರೆ ಶಿವನ ಒಂದು ರೂಪ ಅಥವಾ ಅವತಾರ ಎಂದು ತಿಳಿದಿದ್ದಾರೆ. ಇದರಿಂದ ಮಾದೇಶ್ವರರ ಗದ್ದುಗೆ ದೇವಸ್ಥಾನದಂತೆ ಒಂದು ಸ್ಥಾವರ ಕ್ಷೇತ್ರವಾಗಿ ಅಲ್ಲಿ ಅವರ ಪರಂಪರೆಗೆ ಹೊರತಾದ ಉತ್ಸವ ಆಚರಣೆಗಳೇ ನಡೆಯುತ್ತಿವೆ. ಇಂತಹ ಆಚರಣೆಗಳು ಅವರೊಬ್ಬ ಲಿಂಗಾಂಗಯೋಗಿ, ಶರಣ ಪರಂಪರೆಯ ಮಹಾನುಭಾವಿ, ಸಮಾಜ ಸುಧಾರಕ, ಧಾರ್ಮಿಕ ಪುರುಷ ಎಂಬ ಸಂಗತಿಗಳನ್ನು ಅನುಯಾಯಿಗಳಿಗೆ ತಿಳಿಸುವುದೇ ಇಲ್ಲ.

ಮಾದೇಶ್ವರರ ಗದ್ದಿಗೆ ಗಣಪತಿಮಯವಾಗಿದೆ. ದೇವಸ್ಥಾನದ ಮಹಾದ್ವಾರದಲ್ಲಿರುವ ಗಣಪತಿಯನ್ನು ಮೈಸೂರಿನ ತಿಮ್ಮಣ್ಣಾಚಾರ್ ಎಂಬವರು ಸ್ಥಾಪಿಸಿದರೆಂದು ಹೇಳಲಾಗಿದೆ. ಎಲ್ಲ ಕಾರ್ಯಕ್ರಮಗಳಿಗೆ ಪ್ರಾರಂಭದಲ್ಲಿ ಗಣಪತಿಯ ಪೂಜೆ, ಪ್ರಾರ್ಥನೆ ಮಾಡಬೇಕೆಂಬ ನಂಬಿಕೆ ಸಾಂಪ್ರದಾಯಿಕ ಹಿಂದುಗಳಲ್ಲಿರುವುದು ನಿಜ. ಆದರೆ ಅದು ಬಸವ ಪರಂಪರೆಯ ಮಾದೇಶ್ವರರಿಗೆ ಅನ್ವಯಿಸುವುದಿಲ್ಲ. ಐತಿಹಾಸಿಕ ಮಹಾಪುರುಷ ಮಾದೇಶ್ವರರಿಗೂ, ವೈದಿಕ ಸಂಪ್ರದಾಯದ ಕಾಲ್ಪನಿಕ ದೈವ ಗಣಪತಿಗೂ ಯಾವುದೇ ಸಂಬಂಧವಿಲ್ಲ. ಆದರೆ ಮಾದೇಶ್ವರರ ಗದ್ದಿಗೆ-ಗರ್ಭಗುಡಿಯಲ್ಲೇ ಗಣಪತಿ ಇಟ್ಟು, ಗರ್ಭಗುಡಿಯ ದ್ವಾರದಲ್ಲಿ ಸಹ ಗಣಪತಿ ಕೆತ್ತಿಸಿ, ಗಣಪತಿಗೆ ಬೆಳ್ಳಿಯ ಕವಚವನ್ನೂ ತೊಡಿಸಿ, ಮುಖಮಂಟಪದಲ್ಲಿಯೂ ಗಣಪತಿ ಸ್ಥಾಪಿಸಿರುವುದು ನ್ಯಾಯವಲ್ಲ.

ಮಾದೇಶ್ವರರ ಗದ್ದಿಗೆ ಪೂಜಾ ವಿಧಾನ ಸಂಸ್ಕೃತಮಯವಾಗಿದೆ. ಭಾರತದಲ್ಲಿ ಸಂಸ್ಕೃತವು ಮಡಿವಂತ ಭಾಷೆಯಾಗಿ ಪುರೋಹಿತರ ಸ್ವತ್ತಾಯಿತು. ದೇವರನ್ನು ಸಂಸ್ಕೃತ ಭಾಷೆಯಲ್ಲೇ ಮಾತನಾಡಿಸಬೇಕು, ಆ ಭಾಷೆಯೇ ದೇವರಿಗೆ ಅರ್ಥವಾಗುವಂತಹದ್ದು ಎಂಬ ನಂಬಿಕೆ ಕೆಲವರಲ್ಲಿತ್ತು. ದೇವರಿಗೆ ಕನ್ನಡವೂ ಅರ್ಥವಾಗುತ್ತದೆ ಎಂದು ಅವನನ್ನು ಕನ್ನಡದಲ್ಲೇ ಸ್ತುತಿಸಿ ಎಂದು ಕನ್ನಡಕ್ಕೆ ಪೂಜನೀಯ ಸ್ಥಾನ ಕೊಟ್ಟವರು ಬಸವಣ್ಣನವರು. ನಮ್ಮ ರಾಜ್ಯಭಾಷೆ ಕನ್ನಡ, ಬಸವಾದಿ ಶರಣರ ಭಾಷೆಯೂ ಕನ್ನಡ. ಮೇಲಾಗಿ ಮಾದೇಶ್ವರರೂ ಸಹ ಕನ್ನಡಿಗರೇ. ಕನ್ನಡನಾಡಿನಲ್ಲೇ ಮೆರೆದು ಕರ್ನಾಟಕದ ಬೆಟ್ಟದಲ್ಲಿಯೇ ಲಿಂಗೈಕ್ಯರಾಗಿರುವುದು ಕನ್ನಡ ನಾಡಿನ ವಿಶೇಷ. ಆದರೆ ಇಂದು ಅದೇ ಕ್ಷೇತ್ರದಲ್ಲಿ ಸಂಸ್ಕೃತ ಪಾಠಶಾಲೆಯಾಗಿ ಸಂಸ್ಕೃತದಲ್ಲಿ ಶೈವಾಗಮದಂತೆ ಎಲ್ಲ ಪೂಜೆಗಳನ್ನು ಮಾಡಲಾಗುತ್ತಿರುವುದು ಸಮಂಜಸವಲ್ಲ.

ಮಾದೇಶ್ವರರ ಚರಿತ್ರೆಯನ್ನು ಪುರಾಣದಂತೆ ಹೇಳಲಾಗಿದೆ. ಅವರು ಅಯೋನಿಜರು, ತಂದೆತಾಯಿ ಹೊಟ್ಟೆಯಲ್ಲಿ ಹುಟ್ಟಲಿಲ್ಲ, ಸಾಕ್ಷಾತ್ ಈಶ್ವರನೇ ಮಾದೇಶ್ವರನಾಗಿ ಭೂಮಿಗೆ ಅವತರಿಸಿದ, ಕೈಲಾಸದಿಂದ ಬಂದವರು ಎಂದೆಲ್ಲ ಮಾತುಗಳು ಕೇಳಿಬರುತ್ತಿವೆ. ಹೀಗೆ ಮಾದೇಶ್ವರರ ಗದ್ದುಗೆಯನ್ನು ದೇವಸ್ಥಾನೀಕರಿಸಿ, ಶೈವೀಕರಿಸಿ, ವೈದಿಕೀಕರಿಸಿ, ಗಣಪತೀಕರಿಸಿ, ವ್ಯಾಪಾರೀಕರಿಸಿ, ಪುರಾಣೀಕರಿಸಿರುವುದು ಅವರಿಗೆ ಮಾಡಿದ ಅಪಮಾನ. ಆಶ್ಚರ್ಯವೆಂದರೆ, ಮಾದೇಶ್ವರರ ಗದ್ದಿಗೆಯ ವಾತಾವರಣ, 'ವೈದಿಕ ಪರಂಪರೆಯನ್ನು ಮೆಚ್ಚಿಸುವಂತಿದೆ, ಮಾದೇಶ್ವರರ ಶರಣ ಪರಂಪರೆಯನ್ನು ನಾಚಿಸುವಂತಿದೆ'.

ಇಷ್ಟೆಲ್ಲ ಸಾಲದೆಂಬಂತೆ ಮಾದೇಶ್ವರಸ್ವಾಮಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ, ದೇವಸ್ಥಾನದ ಒಳ ಆವರಣದಲ್ಲಿ ೧೧-೨-೨೦೦೮ರಂದು ಬಲಿಪೀಠ ಎಂದು ಸ್ಥಾಪಿಸಿದರು. ಪ್ರಾಣಿಬಲಿ ಕೊಡದೇ ಇದ್ದರೂ 'ಬಲಿ' ಪದ ಬಳಸಿರುವುದೇ ತಪ್ಪು. ಬಲಿಪೀಠ ಎಂದರೆ ಬಲಿಯನ್ನು ಕೊಡುವ ಸ್ಥಳ ಎಂದೂ ಅರ್ಥವಾಗುವುದರಿಂದ ಅದು ಪ್ರಾಣಿಬಲಿ ಕೊಡಲು ಪ್ರೇರೇಪಣೆಯಾಗುತ್ತದೆ ಎಂದು ಅದನ್ನು ನಾವು ವಿರೋಧಿಸಿದಾಗ ೨೯-೩-೨೦೦೮ರಂದು ಬಲಿಪೀಠ ಹೆಸರನ್ನು ಬದಲಾಯಿಸಿ ಇಷ್ಟಾರ್ಥಸಿದ್ಧಿಪೀಠ ಎಂದು ನಿರ್ಣಯಿಸಿದರು. ಇದನ್ನೂ ಪ್ರತಿಭಟಿಸಿದಾಗ ಅವರು ಶ್ರೀಪೀಠ ಹೆಸರನ್ನು ಸೃಷ್ಟಿಸಿ ಗೊಂದಲವೆಬ್ಬಿಸಿದರು. ಈ ಎಲ್ಲ ಹೆಸರುಗಳೂ ವೈದಿಕ ಮೂಲದವುಗಳೇ. ಆದರೆ ಮಾದೇಶ್ವರರದು ಶರಣ ಸಂಸ್ಕೃತಿ. ಅಂತಹ ನಾಮಾಂಕಿತಗಳಿಂದ ಇಷ್ಟಾರ್ಥ ಸಿದ್ಧಿಯಾಗುತ್ತದೆಂಬ ತಪ್ಪು ಸಂದೇಶ ನೀಡಿದಂತಾಗಿ, ಪುರೋಹಿತಶಾಹಿ ಪ್ರವೇಶಕ್ಕೆ ಕಾರಣವಾಗಿ, ಶೋಷಣೆಗೆ ಅವಕಾಶವಾಗುತ್ತದೆ. ಜನರನ್ನು ಭಯಭೀತಿಗೊಳಿಸುವ, ಮೂಢರನ್ನಾಗಿಸುವ ಇಷ್ಟಾರ್ಥಸಿದ್ಧಿಪೀಠವು ವ್ಯಾಪಾರೀಕರಣಕ್ಕೆ ದಾರಿ ಮಾಡುವ ಕೇಂದ್ರವಾಗುವುದೇ ಹೊರತು ಅದು ಮಾದೇಶ್ವರರು ಬಯಸಿದ ಶರಣ ಅಥವಾ ಜಂಗಮಕ್ಷೇತ್ರವಾಗುವುದಿಲ್ಲ. ಅಂಥ ಪರಮ ಪವಿತ್ರಾತ್ಮರಾದ ಮಾದೇಶ್ವರರ ಶರಣಪರಂಪರೆಯಲ್ಲಿ ಯಾವುದೇ ಪ್ರತಿಷ್ಠಾಪನೆ ಅಸ್ತಿತ್ವದಲ್ಲಿಲ್ಲ. ದೇವಸ್ಥಾನ ಕ್ಷೇತ್ರ ವ್ಯಾಪ್ತಿಯಲ್ಲಿ ಮಾದೇಶ್ವರರ ಗದ್ದುಗೆ ಹೊರತುಪಡಿಸಿ ಬೇರೆ ಯಾವುದೇ ಪೀಠ, ದೇವಾಲಯ ನಿರ್ಮಿಸುವಂತಿಲ್ಲ. ಇಲ್ಲಿನ ಪ್ರತಿಯೊಂದು ಸ್ಥಳವೂ ಮಾದೇಶ್ವರರ ಮಹಿಮೆಯ ಪ್ರತೀಕವೆಂಬಂತಿದೆ. ತರಾತುರಿಯಲ್ಲಿ ಅದನ್ನು ಇದನ್ನು ನೋಡಿ ಅವರನ್ನು

ಇವರನ್ನು ಕೇಳಿ ಎಲ್ಲೋ ವೈದಿಕ ಶೈವ ದೇವಸ್ಥಾನಗಳಲ್ಲಿ ಸ್ಥಾಪಿಸಿರಬಹುದಾದ ಪೀಠಗಳನ್ನು ಅನುಕರಿಸಿ, ಆಧುನಿಕೀಕರಣದ ನೆಪದಲ್ಲಿ ಗದ್ದುಗೆಯಲ್ಲಿ ಇಷ್ಟಾರ್ಥಸಿದ್ಧಿಪೀಠ ಸ್ಥಾಪಿಸಿರುವುದು ಮಾದೇಶ್ವರರ ಪರಂಪರೆಗೆ ಚ್ಯುತಿ. ಹೀಗಾಗಿ ಗದ್ದಿಗೆಯ ಭವಿಷ್ಯ ಊಹಿಸಲಸಾಧ್ಯ. ಇದು ಅತ್ಯಂತ ಕಳವಳಕಾರಿ. ಇದಕ್ಕೆಲ್ಲ ಜನರಿಗೆ ಮಾದೇಶ್ವರರ ಬೋಧನೆಗಳ ಅರಿವಿಲ್ಲದಿರುವುದೇ ಕಾರಣ. ಹಿಂದೆ ಮಾದೇಶ್ವರರು ಮಾಡುತ್ತಿದ್ದಂತೆ ಜನರಿಗೆ ಲಿಂಗಧಾರಣೆ ಮಾಡಿಸಿ, ಧರ್ಮ ಸಂಸ್ಕಾರ ನೀಡಿ, ಅಷ್ಟಾವರಣ, ಪಂಚಾಚಾರ, ಷಟಸ್ಥಲ ತತ್ವಗಳನ್ನು ಬೋಧಿಸಿ, ಮಾದೇಶ್ವರರ ಜೀವನ, ಸಾಧನೆ, ಪರಂಪರೆಗಳನ್ನು ಪ್ರಚಾರ ಮಾಡಿ, ಅವರ ಆಲೋಚನೆ ಭಾವನೆಗಳಿಗೆ ಅನುಗುಣವಾದ ಆಚಾರ ವಿಚಾರಗಳನ್ನು ತರಬೇಕು. ಸುಮಾರು ೬೦೦ ವರ್ಷಗಳ ಇತಿಹಾಸವಿರುವ ದೇವಸ್ಥಾನದ ಆವರಣದಲ್ಲಿ ಎಲ್ಲಿಯೂ ಬಲಿಪೀಠವಾಗಲಿ, ಇಷ್ಟಾರ್ಥಸಿದ್ಧಿಪೀಠವಾಗಲಿ, ಶ್ರೀಪೀಠವಾಗಲಿ, ಇನ್ನಾವುದೇ ಹೆಸರಿನ ಪೀಠವಾಗಲಿ ಇರಲಿಲ್ಲ. ಭಕ್ತಾದಿಗಳು ಬರುವುದು ಮಾದೇಶ್ವರರ ಮೇಲಿನ ಭಕ್ತಿಯಿಂದಲೇ ವಿನಾ ಕಲ್ಲಿನ ಪೀಠದ ಮೇಲಿನ ಭಕ್ತಿಯಿಂದಲ್ಲ. ಹರಕೆ ಮಾಡಿಕೊಳ್ಳಬೇಕೆಂಬ ಮೂಢತನ ಬೆಳೆಯಲು ಕಾರಣವಾಗುವ ಹರಕೆಪೀಠ ಎಂದಾಗಲಿ, ಕಲ್ಲುಪೀಠದ ಮೇಲೆ ಭಕ್ತಿ ಬೆಳೆಸುವ ಭಕ್ತಿಪೀಠ ಎಂದಾಗಲಿ, ಕಲ್ಲುಪೀಠಕ್ಕೆ ಧರ್ಮಪೀಠ, ಶ್ರೀಪೀಠ ಎಂದಾಗಲಿ ಅಥವಾ ಇನ್ನಾವುದೇ ಹೆಸರಿಟ್ಟು ಗುರುತಿಸುವ ಅವಶ್ಯಕತೆ ಇಲ್ಲ. ಮಾದೇಶ್ವರರ ಗದ್ದುಗೆಯೊಂದೇ ಶ್ರದ್ಧಾಕೇಂದ್ರವಾಗಿದ್ದರೆ ಸಾಕು.

ಮಾದೇಶ್ವರಬೆಟ್ಟದ ಮಾದೇಶ್ವರಸ್ವಾಮಿ ದೇವಸ್ಥಾನದ ಮಳಿಗೆ ಸೇರಿದಂತೆ ವಿವಿಧೆಡೆ ಮಾರಾಟವಾಗುವ ಅಂಗಡಿಗಳಲ್ಲಿನ ಮಾದೇಶ್ವರರ ಭಾವಚಿತ್ರಗಳಲ್ಲಿ ಅವರ ಕೊರಳಲ್ಲಿ ಇಷ್ಟಲಿಂಗ ಧರಿಸಿಲ್ಲ! ಹೀಗೆಯೇ ಇನ್ನೂ ಅನೇಕ ಕಡೆ ಆಗಿದೆ. ಇದು ಮಲೆ ಮಾದೇಶ್ವರರಿಗೆ ಮಾಡಿದ ಅಪಮಾನ ಮಾತ್ರವಲ್ಲ ಶರಣ ಪರಂಪರೆಗೂ ಅಪಚಾರ. ಇದಕ್ಕೆಲ್ಲ ಸಂಬಂಧಪಟ್ಟವರ ನಿರ್ಲಕ್ಷ್ಯವೇ ಕಾರಣ. ಈ ಬಗ್ಗೆ ಪ್ರತಿಭಟನೆ ಧರಣೆ ನಡೆಸಿ ಮನವಿ ಕೊಟ್ಟಿದ್ದಾಗ್ಯೂ ಪ್ರಯೋಜನವಾಗಿಲ್ಲ. ೧೨ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರಿಂದ ಸ್ಥಾಪನೆಯಾಗಿ ಅಲ್ಲಮಪ್ರಭುದೇವರ ಅಧ್ಯಕ್ಷತೆಯಿಂದ ಪ್ರಾರಂಭವಾಗಿರುವ ಶೂನ್ಯಪೀಠದ ಆರನೆಯ ಜಗದ್ಗುರು ಮಾದೇಶ್ವರರು ಇಷ್ಟಲಿಂಗಧಾರಿಗಳು. ಶೂನ್ಯಪೀಠ ಮತ್ತು ಸಾಲೂರುಮಠದ ಅಧಿಕಾರಿಗಳೆಲ್ಲ ಇಷ್ಟಲಿಂಗಧಾರಿಗಳೇ. ದೇವಸ್ಥಾನ ಸಮೀಪದ ದೇವರಪುರ ಗ್ರಾಮದಲ್ಲಿ ವಾಸಿಸುತ್ತಿರುವ ತಮ್ಮಡಿಗಳೆಲ್ಲ ಲಿಂಗಾಯತರಾಗಿದ್ದಾರೆ. ಮಾದೇಶ್ವರರ ಗದ್ದುಗೆ ಪೂಜಿಸುವವರೆಲ್ಲ ಲಿಂಗವಂತ ತಮ್ಮಡಿಗಳೇ. ಜಗತ್ತಿಗೊಡೆಯ ನಿರಾಕಾರ ಪರಮಾತ್ಮನ ಕುರುಹೇ ಇಷ್ಟಲಿಂಗ. ಮಾದೇಶ್ವರರು ಉದ್ಯೋಗ-ಜಾತಿ-ಲಿಂಗ ಭೇದಗಳಿಲ್ಲದೆ ಅಲ್ಲಿ ಆ ಸೋಲಿಗರು, ಕುರುಬರು, ಬೇಡರಿಗೆಲ್ಲ ಧರ್ಮಸಂಸ್ಕಾರದ ಹಕ್ಕನ್ನು ಒದಗಿಸಿದ್ದು, ಲಿಂಗಧಾರಣೆ ಮಾಡುವ ಮೂಲಕವೇ. ಪರಮಾತ್ಮನನ್ನು ನೇರವಾಗಿ ಪೂಜಿಸುವ ಅವಕಾಶವನ್ನು ಆ ಕಾಡುಜನರಿಗೆ ಒದಗಿಸಿದ್ದು ಇಷ್ಟಲಿಂಗದಿಂದ, ಶರಣಧರ್ಮದ ಮೂಲಸಿದ್ಧಾಂತವೇ ಇಷ್ಟಲಿಂಗಧಾರಣೆ. ಡಾ.ಬಿ.ಶಿವಮೂರ್ತಿಶಾಸ್ತ್ರಿಗಳು ಬರೆದಿರುವ 'ಶ್ರೀ ಮಾದೇಶ್ವರ ಚರಿತ್ರೆ' ಗ್ರಂಥದಲ್ಲಿ ಮಾದೇಶ್ವರರ ಭಾವಚಿತ್ರಕ್ಕೆ ಇಷ್ಟಲಿಂಗ ಧರಿಸಿದೆ. ಸತ್ಯ ಹೀಗಿರುವಾಗ ಇಷ್ಟಲಿಂಗಧಾರಿಗಳಾದ ಮಾದೇಶ್ವರರ ಭಾವಚಿತ್ರಗಳಲ್ಲಿ ಇಷ್ಟಲಿಂಗ ಕೈಬಿಟ್ಟಿರುವುದು ಅಕ್ಷಮ್ಯ. ಇಷ್ಟಲಿಂಗ ಧರಿಸುವ ಮೂಲಕ ಅದನ್ನು ಸರಿಪಡಿಸಬೇಕು.

ಮಾದೇಶ್ವರಬೆಟ್ಟದಲ್ಲಿ ಹೋಮ-ಹವನ ನಡೆಸುವ ಬಗ್ಗೆ ಟೀಕೆಟಿಪ್ಪಣಿಗಳು ಕೇಳಿಬಂದಿವೆ. ಹೋಮ-ಹವನ ವೈದಿಕ ಧರ್ಮದ ಮುಖ್ಯ ವಿಧಿ. ಅಗ್ನಿಗೆ ಹವಿಸ್ಸನ್ನು ಕೊಡುವ ಮೂಲಕ ಎಲ್ಲ ಕಾರ್ಯಗಳು ನೆರವೇರುವುವು. ಆದರೆ ಶರಣ ಸಂಸ್ಕೃತಿಯಲ್ಲಿ ಎಲ್ಲ ಕ್ರಿಯೆಗಳೂ ಗುರುಲಿಂಗಜಂಗಮ ಸಾಕ್ಷಿಯಾಗಿ ಆಗುವುವು. ಮಾದೇಶ್ವರರ ಶರಣಪರಂಪರೆಯಂತೆ ಹೋಮ-ಹವನ ಮಾಡುವಂತಿಲ್ಲ. ಶರಣ ಸಂಸ್ಕೃತಿಯಲ್ಲಿ ಅದು ಅಸ್ತಿತ್ವದಲ್ಲಿಲ್ಲ. ಅಮೂಲ್ಯ ವಸ್ತುಗಳನ್ನು ಹೋಮದ ಮೂಲಕ ಬೆಂಕಿಯಲ್ಲಿ ಹಾಕಿ ಸುಡುವ ಧಾರ್ಮಿಕ ವಿಧಿಯನ್ನು ಬಸವಣ್ಣನವರು ವಿರೋಧಿಸಿದ್ದಾರೆ. ಮಾದೇಶ್ವರರದು ತಿಂದುಣ್ಣುವ ಪದಾರ್ಥಗಳನ್ನು ಬೆಂಕಿಯಲ್ಲಿ ಸುಡುವ ಧರ್ಮವಲ್ಲ, ಹಸಿದವರಿಗೆ ಕೊಡುವ ಧರ್ಮ. ಮಾದೇಶ್ವರರು ಅಗ್ನಿ ಪೂಜಕರಲ್ಲ. ಹೋಮ-ಹವನಗಳನ್ನು ಅಲ್ಲಿ ಮಾಡಬಾರದು. ಇದೆಲ್ಲ ಶರಣಪರಂಪರೆಯೊಂದರ ಮೇಲೆ ಪುರೋಹಿತಶಾಹಿಯ ದಾಳಿ ಎಂಬುವುದರಲ್ಲಿ ಅನುಮಾನವಿಲ್ಲ. ದೇವರು, ಧರ್ಮ, ಆಧ್ಯಾತ್ಮಗಳು ಅರಿವಿಲ್ಲದೆ ಜನರು ಶೋಷಣೆಗೆ ಒಳಗಾಗಿದ್ದಾರೆ. ಜ್ಞಾನದಾಸೋಹ ಮಾಡಿ, ಮೂಢನಂಬಿಕೆ ಹೋಗಲಾಡಿಸಿ, ಮಾದೇಶ್ವರರ ಉಪದೇಶಗಳನ್ನು ಜಾರಿಗೊಳಿಸುವ ಮತ್ತು ಕ್ಷೇತ್ರದ ಅಸ್ತಿತ್ವ ಅಭಿವೃದ್ಧಿಗಳಿಗೆ ಕಾರಣರಾಗಿ ಹಿಂದಿನಿಂದಲೂ ಮಾದೇಶ್ವರರ ಗದ್ದಿಗೆ ಪೂಜಿಸುತ್ತ ಬಂದಿರುವ ತಮ್ಮಡಿಗಳ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ, ಆ ಹೋಮಕ್ಕೆ ಖರ್ಚು ಮಾಡುವ ಹಣವನ್ನು ಬಳಸಿದ್ದರೆ ಮಾದೇಶ್ವರರು ಮೆಚ್ಚುತ್ತಿರಲಿಲ್ಲವೇ?

'ಶ್ರೀ ಮಹದೇಶ್ವರ ದರ್ಶನಮ್' ಎಂಬ ದೇವಸ್ಥಾನದ ಮಾಸ ಪತ್ರಿಕೆಯ ಮುಖಪುಟದ ಮಾದೇಶ್ವರಸ್ವಾಮಿಯವರ ಭಾವಚಿತ್ರದ ಅವರ ಹಣೆಯಲ್ಲಿ ಕುಂಕುಮ ಇಟ್ಟಿದ್ದಾರೆ! ಇನ್ನೂ ಅನೇಕ ಕಡೆ ಹೀಗೆಯೇ ಆಗಿದೆ. ಕುಂಕುಮ ವೈದಿಕ ಸಂಸ್ಕೃತಿಯ ಸಂಕೇತ. ಇದನ್ನು ಧರಿಸಲು ಹಿಂದೂಧರ್ಮ ವಿವಾಹಿತ ಮಹಿಳೆಯರಿಗೆ ಕಡ್ಡಾಯಗೊಳಿಸಿ, ವಿಧವೆಯರಿಗೆ ನಿಷೇಧಿಸಿದೆ. ಕುಂಕುಮ ಹಾಕುವುದು ಶರಣ ಸಂಸ್ಕೃತಿಯಲ್ಲಿ ಇಲ್ಲ. ಶರಣರು ಕುಂಕುಮ ಧರಿಸುವುದಿಲ್ಲ. ಮಾದೇಶ್ವರರು ಕುಂಕುಮಧಾರಿಗಳಲ್ಲ. ಆದ್ದರಿಂದ ಅವರ ಎಲ್ಲ ಭಾವಚಿತ್ರಗಳಲ್ಲಿ ಅವರ ಹಣೆಯಲ್ಲಿ ಕುಂಕುಮ ತೆಗೆಸಬೇಕು.

ಮಾದೇಶ್ವರರದು ಶರಣಪರಂಪರೆ. ಆದರೆ ವೇದಗಳನ್ನು ಮಾನ್ಯ ಮಾಡುವುದು, ದೇವಸ್ಥಾನ ಸಂಸ್ಕೃತಿ, ಗಣಪತಿ ಪ್ರತಿಷ್ಠಾಪನೆ, ಚತುರ್ವರ್ಣ, ಚತುರಾಶ್ರಮ, ಬಹುದೇವತೋಪಾಸನೆ, ತೀರ್ಥಕ್ಷೇತ್ರ ಯಾತ್ರೆಯಲ್ಲಿ ನಂಬಿಕೆ, ಜ್ಯೋತಿಷ್ಯ, ಮುಹೂರ್ತ, ಜಾತಕ, ಪುರೋಹಿತರ ಮೂಲಕ ಪೂಜೆ, ಉದ್ಯೋಗದಲ್ಲಿ ಮೇಲು-ಕೀಳು, ಹೋಮ-ಹವನ, ಯಜ್ಞ-ಯಾಗ, ದ್ವಿಜರಿಗೆ ಮಾತ್ರ ಉಪನಯನ, ಶೂದ್ರರು, ಅಸ್ಪೃಶ್ಯರು, ಎಲ್ಲ ವರ್ಣಗಳ ಸ್ತ್ರೀಯರಿಗೆ ಉಪನಯನವಿಲ್ಲ, ಸಸ್ಯಾಹಾರ-ಮಾಂಸಾಹಾರ ಎರಡೂ ಉಂಟು, ಸೂತಕಗಳಲ್ಲಿ ನಂಬಿಕೆ, ವಿವಾಹದಲ್ಲಿ ಅಗ್ನಿಸಾಕ್ಷಿ, ಉಪವಾಸ ವ್ರತ ಮುಂತಾದವು ಹಿಂದು ಧರ್ಮದ ಲಕ್ಷಣಗಳು. ಇವುಗಳನ್ನು ವಿರೋಧಿಸಿ ಹುಟ್ಟಿದ ಲಿಂಗಾಯತ ಧರ್ಮ ಸ್ಥಾಪಕರಾದ ಬಸವಣ್ಣನವರ ಪರಂಪರೆಯವರೇ ಮಾದೇಶ್ವರರು ಎಂಬುದು ಗಮನಾರ್ಹ.

ಮಹಾಪುರುಷರ ಅಧ್ಯಯನದಲ್ಲಿ ಅವರ ಇತಿಹಾಸ ಮುಖ್ಯ. 'ಹೀಗೆ ಖಚಿತವಾಗಿ ನಡೆದದ್ದು' ಇದು ಇತಿಹಾಸ ಪದದ ಅರ್ಥ. ಅಂದರೆ ಹಿಂದೆ ನಡೆದ ಘಟನೆಗಳನ್ನು

ವೈಜ್ಞಾನಿಕವಾಗಿ ತಿಳಿದುಕೊಳ್ಳುವುದೇ ಇತಿಹಾಸ. ಸತ್ಯಾನ್ವೇಷಣೆಯು ಇತಿಹಾಸದ ಗುರಿ. ನಂಬಲಾಗದ ಕಾಲ್ಪನಿಕ ಕಟ್ಟುಕತೆಗಳು ಇತಿಹಾಸವಲ್ಲ. ಮೂಲ ಆಧಾರಗಳಿಲ್ಲದೆ ಇತಿಹಾಸವಿಲ್ಲ. ಇತಿಹಾಸವಿಲ್ಲದೆ ಮಹಾಪುರುಷರ ವ್ಯಕ್ತಿತ್ವವನ್ನು ಗುರುತಿಸುವುದು ಕಷ್ಟ. ಅದರಿಂದ ಮಾದೇಶ್ವರರ ಇತಿಹಾಸವನ್ನು ಬರೆಯುವಾಗ ಶ್ರೀಶೈಲ, ಸುತ್ತೂರು ಮಠ, ಕುಂತೂರು ಮಠ, ಇಷ್ಟಲಿಂಗಧಾರಣೆ, ಸಾಲೂರು ಮಠ, ಮಾದೇಶ್ವರರ ಗದ್ದಿಗೆ, ಪಂಚಮಠಗಳು, ಬೇಡಗಂಪಣರಾಜ್ಯ, ಆಲಂಬಾಡಿ ಜುಂಜೇಗೌಡ, ಕಾರಯ್ಯ, ಬಿಲ್ಲಯ್ಯ, ಅನ್ನಸಾಲಮ್ಮ, ಶೇಷಣ್ಣೊಡೆಯ, ತಮ್ಮಡಿಗಳ ಮನೆತನ, ದೇವರಹಳ್ಳಿ, ಬಸವಧರ್ಮತತ್ವ, ಶೂನ್ಯಪೀಠ, ಬಸವಕಲ್ಯಾಣ ಮುಂತಾದವುಗಳನ್ನು ಗಮನಿಸಬೇಕು. ಮಾದೇಶ್ವರರಿಗೆ ಸಂಬಂಧಿಸಿದ ತಾಳೆಯೋಲೆ ಗ್ರಂಥ, ಹಸ್ತಪ್ರತಿ, ಶ್ರೀ ಮಾದೇಶ್ವರ ಚರಿತ್ರೆ, ಮಾದೇಶ್ವರ ಸಾಂಗತ್ಯ, ನಿರಂಜನವಂಶರತ್ನಾಕರ, ಸುತ್ತೂರು ಗುರುಪರಂಪರೆ, ಜನಪದಸಾಹಿತ್ಯ, ಸ್ಥಳಪುರಾಣ, ಕಂಪನಿಯ ತಹನಾಮೆ, ಹೈದರಾಲಿ ತಾಮ್ರಶಾಸನ ಮುಂತಾದ ಎಲ್ಲ ಶಾಸನ, ಸಾಹಿತ್ಯ, ಸ್ಮಾರಕ ಆಧಾರಗಳನ್ನು ಸಂಗ್ರಹಿಸಿ, ಮಾದೇಶ್ವರರ ಜೀವನ, ಸಾಧನೆ, ಧರ್ಮಪ್ರಸಾರ, ಪರಂಪರೆಗಳನ್ನು ವೈಜ್ಞಾನಿಕವಾಗಿ ಅಧ್ಯಯನಮಾಡಿ, ಅವುಗಳ ಸತ್ಯಾಸತ್ಯತೆಯನ್ನು ವಿಮರ್ಶಿಸಿ, ಅವುಗಳಲ್ಲಿ ಸಿಗುವ ಚಾರಿತ್ರಿಕ ಅಂಶಗಳನ್ನು ಆಯ್ದುಕೊಂಡು, ಮೌಲ್ಯನಿರ್ಣಯಿಸಿ, ನಂಬಲರ್ಹ ಮತ್ತು ಸತ್ಯವಾದುದನ್ನು ಮಾತ್ರ ಮುಕ್ತಮನಸ್ಸಿನಿಂದ ಪರಿಶೀಲಿಸಿ, ಮಾದೇಶ್ವರರ ಸಮಗ್ರ ಜೀವನವನ್ನು ಸಹಜವಾಗಿ ಇತಿಹಾಸ ನಿಷ್ಠರಾಗಿ ಬರೆಯಬೇಕು. ಇದು ಮಾದೇಶ್ವರರ ನಿಜವಾದ ಇತಿಹಾಸ.

ಸರ್ಕಾರ, ಮುಜರಾಯಿ ಇಲಾಖೆ, ಸಾಲೂರು ಮಠ, ದೇವಸ್ಥಾನದ ಯಾವುದೇ ಆಡಳಿತ ಸಮಿತಿ ಇರುವುದು ಮಾದೇಶ್ವರರ ಗದ್ದಿಗೆಯ ಮತ್ತು ಪರಂಪರೆಯ ರಕ್ಷಣೆಗಾಗಿಯೇ ಹೊರತು ಆ ಗದ್ದಿಗೆಯ ಆಚರಣೆಯ ವಿಧಿವಿಧಾನಗಳಲ್ಲಿ ಹಸ್ತಕ್ಷೇಪ ಮಾಡುವ, ಮಾದೇಶ್ವರರ ಶರಣಪರಂಪರೆಗೆ ವಿರುದ್ಧವಾಗಿ ಯಾವುದೇ ನಿರ್ಣಯ ಕೈಗೊಳ್ಳುವ, ಯಾವುದೇ ಪೀಠವನ್ನು ಸ್ಥಾಪಿಸುವ, ಗದ್ದಿಗೆಯ ಮೂಲ ಸ್ವರೂಪವನ್ನೇ ಬದಲಾಯಿಸುವ, ಹೋಮ-ಹವನ ಮಾಡುವ, ವೈದಿಕ ವ್ಯವಹಾರಗಳನ್ನು ತುರುಕುವ ಅಧಿಕಾರ ಹಕ್ಕು ಅವಕಾಶ ಯಾವ ಕಾಲಕ್ಕೂ ಯಾರಿಗೂ ಇಲ್ಲ. ಮೇಲೆ ಹೇಳಿದ ಎಲ್ಲ ವಿಷಯಗಳನ್ನು ಗಮನಿಸಿ, ಜನತೆ ಶರಣ ಸಂಸ್ಕೃತಿಯ ಮೇಲಾಗುತ್ತಿರುವ ಹಲ್ಲೆಯನ್ನು ಪ್ರತಿಭಟಿಸಿ, ಈ ಸಂಚು ಎಲ್ಲರಿಗೂ ಮನವರಿಕೆಯಾಗಿ ಅದು ಮತ್ತಷ್ಟು ಹಬ್ಬದಂತೆ ತಡೆಯುವುದು ತುರ್ತು ಅಗತ್ಯ.

ಆದುದರಿಂದ, ಮಲೆ ಮಾದೇಶ್ವರರ ಕ್ಷೇತ್ರವ್ಯಾಪ್ತಿಯಲ್ಲಿ ಅವರ ಪರಂಪರೆಗೆ ಹೊರತಾದ ಈಗ ಸ್ಥಾಪಿಸಿಕೊಂಡಿರುವ ಎಲ್ಲ ಮೂರ್ತಿ ಪ್ರತಿಷ್ಠಾಪನೆಗಳನ್ನು ತೆರವುಗೊಳಿಸಿ, ಎಲ್ಲ ವೈದಿಕ ವ್ಯವಹಾರಗಳನ್ನು ಹೊರಹಾಕಿ, ಎಲ್ಲ ಲೋಪದೋಷಗಳನ್ನು ಸರಿಪಡಿಸಿ ಮಾದೇಶ್ವರರ ಪರಂಪರೆಯನ್ನು ಉಳಿಸಬೇಕು.

ಸು.ಮಲ್ಲಿಕಾರ್ಜುನಪ್ಪ, ಎಂ.ಎ.,ಬಿ.ಇಡಿ.,
ಮತ್ತೀಪುರ ೫೭೧ ೪೪೩, ಕೊಳ್ಳೇಗಾಲ ತಾಲ್ಲೂಕು,
ಚಾಮರಾಜನಗರ ಜಿಲ್ಲೆ

ಯಾರು ನನ್ನವರು ಈ ಲೋಕದೊಳಗೆ ?

- ಸಚ್ಚಿದಾನಂದ ಚಟನಳ್ಳಿ

ಆದಿಯವಾಗಲಿ, ವೇದದಲಾಗಲಿ, ಶಾಸ್ತ್ರದಲಾಗಲಿ, ಸಮಯದಲಾಗಲಿ;
ಎನ್ನವರೆನ್ನೆನು ಎನ್ನವರೆನ್ನೆನು !
ಎನ್ನವರೆಂದಡೆ, ಸಂಗಾ ನಿಮ್ಮಲಿಗೆ ದೂರ !
ಎನ್ನವರಾದಡೆ ಜನ್ನಕ್ಕೆ ನಡೆವರೆ?
ಎನ್ನವರಲ್ಲ, ಕೂಡಲ ಸಂಗಮದೇವಾ (ಬ.ವ.ದೀ-710)

ಅತ್ಯಂತ ಶ್ರೇಷ್ಠವಾದ, ಉದಾತ್ತವಾದ ಲಿಂಗಾಯತ ಧರ್ಮದ, ಶರಣ ಪರಂಪರೆಯವರಾದ ನಾವು, 12ನೇ ಶತಮಾನದ ಶರಣರಂತೆ ಆಗುವಲ್ಲಿ ಎಲ್ಲೋ ತಪ್ಪುತ್ತಿದ್ದೇವೆ ಎಂದು ನನಗನಿಸುತ್ತಿದೆ. 12ನೇ ಶತಮಾನದ ಶರಣರ ನುಡಿಯನ್ನು ಕೇಳಿ ಸಂತೋಷ ಪಡುತ್ತಿದ್ದೇವೆಯೇ ಹೊರತು ಅವರ ನಡೆಯನ್ನು ಅನುಕರಣೆ ಮಾಡುವಲ್ಲಿ ವಿಫಲರಾಗಿದ್ದೇವೆ ಎನಿಸುತ್ತಿದೆ. ಹೀಗಾಗಬಾರದು. ನಾವು ಧರ್ಮಗುರು ಬಸವಣ್ಣನವರ ಹಾಗು ಆದಿ ಶರಣರ ನಡೆಯನ್ನೂ ಅಳವಡಿಸಿಕೊಳ್ಳಬೇಕು. ಅಂದು ಗುರು ಬಸವಣ್ಣನವರು, ಬಂಧು ಬಳಗದವರು ಬಂದರೆ ಸಮಯವಿಲ್ಲ ಎಂದು, ಶರಣರು ಬಂದರೆ ಗುಡಿ ತೋರಣವ ಕಟ್ಟಿ ಸ್ವಾಗತಿಸಿ ಎನ್ನುತ್ತಿದ್ದರು. "ಆದಿಯಲಾಗಲಿ (ಹುಟ್ಟಿನಿಂದ ಸಂಬಂಧವಿರುವವರ) ವೇದ, ಶಾಸ್ತ್ರ ಅಧ್ಯಯನದಿಂದ ಸಂಬಂಧ ಇರುವವರನ್ನು, ಸಮಯದಲ್ಲಿ-ಹುಟ್ಟಿದ ಜಾತಿಯಿಂದ ಸಂಬಂಧವಿರುವವರನ್ನು ನನ್ನವರು ಎನ್ನಲಾರೆ" ಎನ್ನುತ್ತಾರೆ ಗುರು ಬಸವಣ್ಣನವರು. ಅವರು ಅನೇಕ ವಚನಗಳನ್ನು ತಮಗೇ ಸಂಬಂಧಿಸಿಕೊಂಡು ಹೇಳಿದರೂ ಅವುಗಳು ನಮಗಾಗಿಯೇ ಹೇಳಲ್ಪಟ್ಟಿವೆ. ಗುರು ಬಸವಣ್ಣನವರು ಸಮಾಜವನ್ನು ತಿದ್ದಲು, ಬಳಸಿರುವ ಭಾಷೆಯ ಪರಿ ಅದು. "ಎನ್ನವರಾದಡೆ ಜನ್ನಕ್ಕೆ ನಡೆವರೆ?" ನಾವು ಇಷ್ಟಲಿಂಗ ಧಾರಿಯಾದ ಶರಣರು, ಬಸವ ಮಾರ್ಗದಲ್ಲಿ ನಡೆಯುತ್ತಿದ್ದೇವೆ ಯಾರನ್ನು ನಾವು ನನ್ನವರೆನ್ನಬೇಕು? ಬಸವ ಪಥದಲ್ಲಿ ನಡೆವವರನ್ನು ಮಾತ್ರ ನನ್ನವರೆನ್ನಬೇಕು, ಅವರೇ ನಮಗೆ ಬಂಧುಗಳು. ಅಕ್ಕಮಹಾದೇವಿ ತಾಯಿಯವರು "ಎಳೇಳು ಜನ್ಮದಲ್ಲಿ ಶಿವಭಕ್ತರೇ ಬಂಧುಗಳೆನಗೆ" ಎನ್ನುತ್ತಾರೆ. ಹಾಗೆಯೇ ಭಕ್ತರೇ ನಮ್ಮ ಬಂಧು ಬಳಗ ಎಂದು ತಿಳಿದು ಕೊಳ್ಳಬೇಕು. ಜನ್ನ ಎಂದರೆ ಯಜ್ಞ, ಎನ್ನವರಾದಡೆ ಯಜ್ಞ (ಹೋಮ, ಹವನ) ಮಾಡುತ್ತಾರೆಯೇ? ಎಂದು ಕೇಳುತ್ತಾರೆ. ನಮ್ಮ ರಕ್ತ ಸಂಬಂಧಿಗಳು ಅನೇಕರು ಇನ್ನೂ ಬಸವ ಮಾರ್ಗಕ್ಕೆ ಬಂದಿರುವುದಿಲ್ಲ ಕೇವಲ ,ಹೆಸರಿಗೆ ಮಾತ್ರ ಲಿಂಗಾಯತರಾಗಿರುತ್ತಾರೆ. ಇಂಥವರು, ಗೃಹ ಪ್ರವೇಶ ಮಾಡುವಾಗ ಹೋಮ, ಗುರು-ಲಿಂಗ-ಜಂಗಮಕ್ಕೆ ಹೊರತಾದ ಪೂಜೆಗಳನ್ನು ಮಾಡಿಸುತ್ತಾರೆ, ಆಗ ನಮ್ಮನ್ನೂ ಕೂಡ ಕರೆಯುತ್ತಾರೆ ಎಂದುಕೊಳ್ಳಿ, ಆಗ ಲಿಂಗಪಥದಲ್ಲಿ ನಡೆಯುವ ನಮ್ಮ ಕರ್ತವ್ಯವೇನು? ನಮ್ಮಿಂದ ಸಾಧ್ಯವಾದರೆ ಅವರಿಗೆ ತಿಳಿ ಹೇಳಿ ಇಂಥ ಮೂಢಾಚರಣೆಗಳನ್ನೆಲ್ಲಾ ಮಾಡಬಾರದು, ಶರಣ ಸಂಸ್ಕೃತಿಯ ಪ್ರಕಾರ, ಬಸವೇಶ್ವರ ಪೂಜಾವ್ರತ ಮಾಡಿ ಎಂತೆಲ್ಲಾ ಹೇಳಬೇಕು. ಕೇಳಿದರೆ ಸರಿ, ಇಲ್ಲ ಎಂದರೆ ಅಂಥವರ ಮನೆಗೆ ಹೋಗಬಾರದು ಎನ್ನುವುದು ಧರ್ಮಪಿತರ ಆಜ್ಞೆ ಇದೆ.

ಏಕೆಂದರೆ ಅವರು ಅನ್ಯದೈವ ಭಜಿಸುತ್ತಾರೆ. ಲಿಂಗಭಕ್ತನಾದವನು ಅನ್ಯ ದೈವದ ಪ್ರಸಾದ ತಿನ್ನಲಾಗದು.

ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಭವಿಯೊಡನೆ ಸಂಗವು ಭಂಗವೆಂದರಿಯರು
ಭವಿಯೊಡನೆ ಸಂಗವ ಮಾಡುವವರು
ಕೂಡಲ ಚೆನ್ನಸಂಗಯ್ಯ ಅವರತ್ತಲೂ ಇಲ್ಲ ಇತ್ತಲೂ ಇಲ್ಲ. (ಚೆ.ಬ.ವ.-34)

ಕೋತಿ ತಾನು ಕೆಡುವುದಲ್ಲದೆ ವನವೂ ಕೂಡ ಕೆಡಿಸುತ್ತದೆ ಎನ್ನುವಂತೆ ಅರೆ ಭಕ್ತರಾದವರು ಅನೇಕ ಸಲ ಆಗಲೇ ನಿಜ ಭಕ್ತಿ ಮಾರ್ಗದಲ್ಲಿ ನಡೆಯುವವರ ನಂಬಿಕೆಯನ್ನು ಅಲ್ಲಾಡಿಸುತ್ತಾರೆ. ಅದಕ್ಕಾಗಿಯೇ ಗುರುಬಸವಣ್ಣನವರು "ಅರೆ ಭಕ್ತರಾದವರ ನೆರೆಬೇಡ, ಹೊರೆಬೇಡ ದಾರಿಸಂಗಡ ಬೇಡ ದೂರ ನುಡಿಯಲು ಬೇಡ," ಎಂದು ಹೇಳಿದ್ದಾರೆ. ಅದಕ್ಕಾಗಿ ಅನ್ಯ ದೈವ ಭಜಿಸುವವರ, ಹೋಮ-ಹವನ, ಲಕ್ಷ್ಮಿ ಸತ್ಯನಾರಾಯಣ, ಪೂಜಾ ವ್ರತಗಳನ್ನು ಮಾಡುವಂಥವರ ಮನೆಗಳಿಗೆ ಹೋಗಬಾರದು. ಏಕೆಂದರೆ

ಅಂಥವರ ಮನದಲ್ಲಿ ಮತ್ತು ಮನೆಯಲ್ಲಿ ಲಿಂಗದೇವನು ಇರಲಾರ. ಲಿಂಗದೇವನಿರದವರ ಮನೆಗೆ ಹೋಗುವುದು ಗುರುಬಸವಣ್ಣನವರಿಗೆ ಸಮ್ಮತವಲ್ಲ.

ಒಡೆಯರಿಲ್ಲದ ಮನೆಯ ತುಡುಗುಣಿ ನಾಯಿ ಹೋಗುವಂತೆ
ನೀನಿಲ್ಲದವರ ಮನೆಯ ಹೊಗೆನು; ಸಂಗಯ್ಯಾ
ಶ್ವಪಚೋಪಿಗಳಾಗಲೀ ಲಿಂಗದೇವನಿದ್ದವನೇ ಕುಲಜನು.

ಶ್ವಪಚೋಪಿಯೆಂದರೆ ಶೂದ್ರ, ವರ್ಣಾಶ್ರಮ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿಯನ್ನು ಶೂದ್ರನೆಂದು ಕರೆದರೂ ಅವನು ಲಿಂಗಧಾರಿಯಾದರೆ ಅವನು ಶೂದ್ರನಲ್ಲ ಅವನೇ ಕುಲಜನು. ಅಂಥವನ ಮನೆಯ ಪ್ರಸಾದ ಎನಗಮೃತಾರೋಗಣೆ ಎನ್ನುತ್ತಾರೆ ಗುರುಬಸವಣ್ಣನವರು. ಸ್ವಜಾತಿಯವರೆಂದು ತಿಳಿದು ಗುರು ಬಸವಣ್ಣನವರು ಯಾವುದೇ ಬ್ರಾಹ್ಮಣರ ಮನೆಯಲ್ಲಿ ಪ್ರಸಾದ ಮಾಡಿಲ್ಲ, ಇದು ಯಾವ ಕಾವ್ಯಗಳಲ್ಲಿಯೂ ಪ್ರಸ್ತಾವನೆಯೂ ಆಗಿಲ್ಲ. ಆದರೆ ವರ್ಣಾಶ್ರಮ ವ್ಯವಸ್ಥೆಯಲ್ಲಿ ಅಸ್ಪೃಶ್ಯರೆಂದು ಕರೆಯಲ್ಪಟ್ಟಿದ್ದ ಕಂಬಳಿನಾಗಿದೇವ, ಸಮಗಾರ ಹರಳಯ್ಯನವರ ಮನೆಯಲ್ಲಿ ಗುರು ಬಸವಣ್ಣನವರು ಪ್ರಸಾದ ಮಾಡಿದ್ದಾರೆ ಇದು ಅನೇಕ ಕಾವ್ಯಗಳಲ್ಲಿಯೂ ಬಂದಿದೆ. ಗುರು ಬಸವಣ್ಣನವರು ಕಂಬಳಿನಾಗಿದೇವನ ಮನೆಯಲ್ಲಿ ಪ್ರಸಾದ ಮಾಡಿದಾಗ ಕೊಂಡೆಗಳು ಬಿಜ್ಜಳನಿಗೆ ಛಾಡಿಯನ್ನು ಹೇಳಿದರು. ಆಗ ಬಿಜ್ಜಳನು ಬಸವಣ್ಣನವರನ್ನು ಕರೆಸಿ ವಿಚಾರಿಸಿರುವ ಘಟನೆ ಹರಿಹರನ ರಗಳೆಯಲ್ಲಿ ತುಂಬಾ ಚೆನ್ನಾಗಿ ಪ್ರಸ್ತಾವನೆಯಾಗಿದೆ. "ಏನು ಬಸವಣ್ಣನವರೇ ನೀವು ಹೊಲೆಯರ ಮನೆಯಲ್ಲಿ ಊಟ ಮಾಡಿದಿರಂತೆ?" ಎಂದು ಬಿಜ್ಜಳ ಕೇಳಿದ. ಆಗ ಗುರುಬಸವಣ್ಣನವರು "ನಾರಯಣ ಕ್ರಮಿತರ ಕೇರಿಯಂ ಪೊಕ್ಕೆನೆ? ಮುಕುಂದಭಟ್ಟರ ಮನೆಯೊಳುಂಡೆನೆ ಸಾರಪೆದ್ದಿಗಳ ಸಾರಿ ನಿಂದೆನೆ? ಹರನರಿಯದ ಹೊಲೆಯರ ಮನೆಯ ಹೊಕ್ಕುಂಡುದಿಲ್ಲ" ಎಂದರು. ಅದಕ್ಕಾಗಿ ಬಸವ ಮಾರ್ಗದಲ್ಲಿ ನಡೆವ ನಾವು ಶರಣರೊಡನೆ ಸಂಬಂಧ ಇಟ್ಟುಕೊಳ್ಳಬೇಕೆ ಹೊರತು ರಕ್ತ ಸಂಬಂಧಿಗಳೊಡನೆ ಅಲ್ಲ.

ಶಿವಜನ್ಮ ಶಿವಕುಲಜನಾಗಿ ಶರಣರ ಮನೆಯ ಒಕ್ಕುದ ಕೊಂಬುದು.
ಭವಭಾರಿಯ ಮನೆಯಲು ಲಿಂಗಾರ್ಚನೆಯ ಮಾಡಲಾಗದು
ಭವಿ ವಿರಹಿತಂ, ಭವಿ ಪಾಕವ ತನ್ನ ಲಿಂಗಕ್ಕೆ ಕೊಟ್ಟೊಡೆ
ರೌರವ ನರಕ ನೋಡಾ, ಇದುಕಾರಣ
ಕೂಡಲ ಚೆನ್ನಸಂಗಯ್ಯ ಭವಿಯಸಂಗ ಪುನರಪಿ ಜನ್ಮ.

ಭವಿಯ ಸಂಗದಿಂದ ನಮಗೂ ಭವ ಬರುತ್ತದೆ ಅದಕ್ಕಾಗಿ ಲಿಂಗ ಸಂಗಿಗಳ ಸಂಗದಲ್ಲಿಯೇ ಶರಣನು ಇರಬೇಕು. 12ನೇ ಶತಮಾನದಲ್ಲಿ ಶರಣರು ಅತ್ಯಂತ ಕಟ್ಟುನಿಟ್ಟಾಗಿ ಧರ್ಮಪಾಲನೆ ಮಾಡಿದುದರಿಂದಲೇ ಅವರು ಜ್ಞಾನಿಗಳಾದರು. ಒಂದು ಗಿಡವು ಗಿಡ ಎನಿಸಿಕೊಳ್ಳಬೇಕಾದರೆ ಎಲೆ, ರೆಂಬೆಗಳು, ಕಾಂಡ ಮತ್ತು ಬೇರು ಬೇಕು. ಇವುಗಳಲ್ಲಿ ಎಲ್ಲಕಿಂತ ಮುಖ್ಯವಾಗಿರುವುದು ಬೇರು. ಎಲೆ, ರೆಂಬೆ ಇಲ್ಲದಿದ್ದರೂ ಗಿಡ ಎನಿಸಿಕೊಳ್ಳುತ್ತದೆ ಆದರೆ ಬೇರಿಲ್ಲದಿದ್ದರೆ ಗಿಡ ಎನಿಸಿಕೊಳ್ಳದು. ಅದೇ ರೀತಿ ಇಷ್ಟಲಿಂಗ ಲಿಂಗಾಯತ ಧರ್ಮದ ಬೇರು. ಅದಿಲ್ಲದೆ ಲಿಂಗವಂತನೆನಿಸಿಕೊಳ್ಳಲಿಕ್ಕಾಗದು. ಲಿಂಗವಿಲ್ಲದೆ ಏನೂ ಮಾಡಲಾಗದು.

ಲಿಂಗವಿಲ್ಲದೆ ನಡೆವನ, ಲಿಂಗವಿಲ್ಲದೆ ನುಡಿವನ, ಲಿಂಗವಿಲ್ಲದವನಂಗ ಸೂತಕ.
ಲಿಂಗವಿಲ್ಲದವನಂಗ ಲೌಕಿಕ, ಮುಟ್ಟಲಾಗದು.
ಲಿಂಗವಿಲ್ಲದೆ ಗಮಿಸಿದೊಡೆ ಆ ನಡೆನುಡಿಗೊಮ್ಮೆ ಪಾತಕ.
ಲಿಂಗವಿಲ್ಲದೆ ನುಡಿವ ಶಬ್ದವ ಕೇಳಲಾಗದು, ಶಿವಾ ಶಿವಾ
ಲಿಂಗವಿಲ್ಲದೆ ಉಗುಳ ನುಂಗಿದೊಡೆ ಕಿಲ್ಬಿಷ ಕೂಡಲ ಚೆನ್ನಸಂಗಮದೇವಾ.

ಲಿಂಗದೀಕ್ಷೆ ಇನ್ನೂ ಯಾರು ತೆಗೆದುಕೊಂಡಿಲ್ಲವೋ ಅಂಥವರಿಗೆ ದೀಕ್ಷೆ ತೆಗೆದುಕೊಳ್ಳಿ ಎಂದು ಹೇಳುವ ನೈತಿಕ ಹಕ್ಕು ನಮಗಿದೆ.

ಅಣ್ಣ, ತಮ್ಮ, ಹೆತ್ತಪ್ಪ, ಗೋತ್ರವಾದಡೇನು?
ಲಿಂಗ ಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ.
ನಂಟು-ಭಕ್ತಿ ನಾಯಕ ನರಕ, ಲಿಂಗದೇವಾ! (ಬ.ವ.ದೀ.-710)

ಒಡಲು ಕೊಟ್ಟ ತಾಯಿ ತಂದೆಯರೇ ಇರಲಿ, ಒಡ ಹುಟ್ಟಿದ ಅಣ್ಣ-ತಮ್ಮ ಅಕ್ಕ-ತಂಗಿಯರೇ ಇರಲಿ, ಒಡಲಲ್ಲಿ ಹುಟ್ಟಿದ ಮಕ್ಕಳೇ ಇರಲಿ ಅಥವಾ ಒಂದೇ ಜಾತಿ ಗೋತ್ರಕ್ಕೆ ಸಂಬಂಧಿಸಿದ ಬಂಧುಗಳೇ ಇರಲಿ, ಲಿಂಗ ಸಾಹಿತ್ಯವಿಲ್ಲದಿದ್ದರೆ, ಅವರು ಇಷ್ಟಲಿಂಗ ದೀಕ್ಷೆ ಹೊಂದದೇ ಹೋದರೆ ಅಂಥವರನ್ನು ನನ್ನವರು ಎನಲಾಗದು. ಅವರಿಗೂ ಇಷ್ಟಲಿಂಗ ದೀಕ್ಷೆ ತೆಗೆದುಕೊಳ್ಳಲು ಪ್ರೇರೆಪಿಸಬೇಕು. ತೆಗೆದುಕೊಳ್ಳದಿದ್ದರೆ, ಅಂಥವರೊಂದಿಗೆ ಯಾವುದೇ ಸಂಬಂಧ ಇಟ್ಟುಕೊಳ್ಳಬಾರದು. ನಂಟು ಭಕ್ತಿ ನಾಯಕ ನರಕ. ಇಲ್ಲಿ ತಾವೊಂದು ಪ್ರಶ್ನೆ ಕೇಳಬಹುದು. ಕೊಡುವ ತೆಗೆದುಕೊಳ್ಳುವ ವ್ಯವಹಾರಗಳಿರುತ್ತವೆ, ನೆಂಟರೊಂದಿಗೆ ಸಂಬಂಧ ಇಟ್ಟುಕೊಳ್ಳದೇ ಹೋದರೆ ಹೇಗೆ? ಎಂದು. ಅದಕ್ಕಾಗಿ ಭಕ್ತಿ ಸಂಬಂಧದಲ್ಲಿಯೇ ರಕ್ತ ಸಂಬಂಧಗಳನ್ನು ಕೂಡ ಬೆಳೆಸಬೇಕು. ಏಕೆಂದರೆ ಭಕ್ತಿ ಮಾರ್ಗದಲ್ಲಿ ನಡೆವವರಿಗೆ ಶರಣರೇ ಸರ್ವಸ್ವ.

ಮನದೈವ, ಕುಲದೈವ ಎನಗೆ ನಿಮ್ಮವರಯ್ಯಾ
ತನು ಮೀಸಲು, ಮನ ಮೀಸಲು, ನಯನ ಮೀಸಲು ಎನ್ನ
ಲಿಂಗದೇವಾ ನಿಮ್ಮ ಶರಣರಿಗೆ

ಶರಣರು ಹಾಗೂ ಭಕ್ತಿ ಸಂಬಂಧಿಗಳು ನಿಸ್ವಾರ್ಥಿಗಳಾಗಿ ನಮಗೆ ಸದಾ ಲೇಸನ್ನು ಬಯಸುತ್ತಾರೆ. ಆದರೆ ರಕ್ತ ಸಂಬಂಧಿಗಳು ಹಾಗಲ್ಲ, ಅನೇಕ ರಕ್ತ ಸಂಬಂಧಿಗಳಿಗೆ ನಮ್ಮ ಏಳಿಗೆ ಅಭಿವೃದ್ಧಿ ಸಹಿಸಲಿಕ್ಕಾಗುವುದಿಲ್ಲ. ಅವರು ನಮ್ಮ ಹಿತೈಷಿಗಳಲ್ಲ, ಹಿತೈಷಿಗಳಂತೆ ಮುಖವಾಡ ಹಾಕಿರುತ್ತಾರೆ ಅಷ್ಟೆ, ನಮ್ಮಿಂದ ಸಾಧ್ಯವಾದಷ್ಟು ಕಿತ್ತುಕೊಳ್ಳಲಿಕ್ಕೆ ನೋಡುತ್ತಾರೆ. ಅವರ ಪ್ರತಿಯೊಂದು ಸಹಾಯದ ಹಿಂದೆ ಸ್ವಾರ್ಥ ತುಂಬಿ ತುಳುಕುತ್ತಿರುತ್ತದೆ.

ಬಂಧುಗಳು ಆದವರು ಬಂದುಂಡು ಹೋಗುವರು
ಬಂಧನವ ಕಳೆಯಲು ಅರಿಯರು। ಗುರುವಿಂದ
ಬಂಧುಗಳು ಉಂಟೇ ಸರ್ವಜ್ಞ?॥

"ಅನ್ನವ ತನ್ನಲಿರುವತನಕ ಎಲ್ಲರೂ ನನ್ನವರೆನ್ನುವರು ಅನ್ನವ ತನ್ನಲಿ ತೀರಿದ ಮರುದಿನವೇ ನನ್ನವರೆನ್ನುವರಾರಿಲ್ಲ" ಎನ್ನುವ ಒಂದು ಪ್ರಸಿದ್ಧ ಗೀತೆಯಿದೆ. ಇದು ರಕ್ತ ಸಂಬಂಧಿಗಳ ಬಗ್ಗೆಯೇ ಬರೆದುದಾಗಿದೆ. ಒಬ್ಬ ವ್ಯಕ್ತಿಯಲ್ಲಿ ಸಂಪತ್ತು ಇರುವವರೆಗೆ ಸಕ್ಕರೆಗೆ ಇರುವೆ ಮುತ್ತಿದಂತೆ ಅವನ ಸುತ್ತ ಬಂಧುಗಳು ಮುತ್ತಿರುತ್ತಾರೆ. ಶರಣರ ಪ್ರಕಾರ ಆಪತ್ತಿಗಾದವನೇ ನಿಜವಾದ ನಂಟ,

ಒಲ್ಲೆನಯ್ಯಾ, ಒಲ್ಲೆನಯ್ಯಾ, ನಿಮ್ಮವರಲ್ಲದವರ;
ಒಲ್ಲೆನಯ್ಯಾ, ಒಲ್ಲೆನಯ್ಯಾ, ಜಗವೆಲ್ಲರಿಯಲು;
ಒಲ್ಲೆನಯ್ಯಾ, ಒಲ್ಲೆನಯ್ಯಾ, ನೀ ಮುನಿದಡೆ ಮುನಿ,
ಲಿಂಗದೇವ ನಿಮ್ಮಾಣೆ ನಿಮ್ಮ ಪ್ರಮಥರಾಣೆ.

(ಬ.ವ.ದೀ-709)

ಲಿಂಗದೇವನನ್ನು ಧರಿಸಿ ಯಾರು ಅರ್ಚಿಸುವುದಿಲ್ಲವೊ ಅವರನ್ನು ನಾನೊಲ್ಲೆ ಎನ್ನುತ್ತಾರೆ ಗುರು ಬಸವಣ್ಣನವರು. ಗುರು ಬಸವಣ್ಣನವರ ಸಂತತಿಯವರಾದ ನಾವು ಇಂಥ ಗುಣಗಳನ್ನು ಅಳವಡಿಸಿಕೊಳ್ಳದಿದ್ದರೆ ಗುರು ಬಸವಣ್ಣನವರು ನಮ್ಮನ್ನೂ ದೂರ ಇಡುತ್ತಾರೆ.

ಅಕ್ಕಮಹಾದೇವಿ ತಾಯಿಯವರು ಹುಟ್ಟಿದ್ದು ಊರಿಗೆ ಶ್ರೀಮಂತನಾಗಿದ್ದ ಓಂಕಾರ ಶೆಟ್ಟಿಯವರ ಮನೆಯಲ್ಲಿ ಉಣಲಿಕ್ಕೆ, ಉಡಲಿಕ್ಕೆ, ಆಭರಣಗಳಿಗೆ ಮತ್ತು ಬಂಧು ಬಳಗ ನೆಂಟರು ಯಾವುದಕ್ಕೂ ಕೊರತೆ ಇರಲಿಲ್ಲ. ಆದರೂ ಅವರು "ಆಡುವುದು ಹಾಡುವುದು, ಹೇಳುವುದು ಕೇಳುವುದು ನಡೆವುದು ನುಡಿವುದು, ಸರಸ ಸಮ್ಮೇಳನವಾಗಿಪ್ಪುದಯ್ಯಾ ಶರಣರೊಡನೆ. ಚೆನ್ನಮಲ್ಲಿಕಾರ್ಜುನಯ್ಯಾ ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ ಲಿಂಗಸುಖಿಗಳ ಸಂಗದಲ್ಲಿ ದಿನಗಳೆವೆನು" ಎಂದು ಶರಣರನ್ನು ಹುಡುಕಿಕೊಂಡು ಅನುಭವ ಮಂಟಪಕ್ಕೆ ಕಾಲ್ನಡಿಗೆಯಲ್ಲಿ ಬಂದರು. ಅವರು ಯಾವ ರಕ್ತ ಸಂಬಂಧಿಗಳ ಹಂಗಿಗೂ ಒಳಗಾಗಲಿಲ್ಲ. ಅವರಿಗೆ ಶರಣರೇ ತಾಯಿ ತಂದೆ, ಅಣ್ಣ ತಮ್ಮ ಅಕ್ಕ ತಂಗಿ ಎಲ್ಲವೂ! ನಾವು ಕೂಡ ಇಂಥ ಮನೋಭಾವನೆಯನ್ನು ಬೆಳೆಸಿಕೊಂಡು ಶರಣರನ್ನು ಆದರಿಸುವ ಅವರೊಡನೆ ಆತ್ಮೀಯತೆಯಿಂದ ಬೆರೆಯುವ ಸದ್ಗುಣಗಳನ್ನು ಬೆಳೆಸಿಕೊಂಡು ಬಸವಾದಿ ಶರಣರು ಮೆಚ್ಚುವಂತೆ ಮರ್ತ್ಯಲೋಕದಲ್ಲಿ ನಿಜ ಶರಣರಾಗಿ ಬಾಳೋಣ.




ಧಾರವಾಡದ ಅಕ್ಕ ಮಹಾದೇವಿ ಆಶ್ರಮದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಬಸವ ಜ್ಯೋತಿ ಕಾರ್ಯಕ್ರಮದ ಸಮಾರೋಪ ಪೂಜ್ಯಶ್ರೀ ಮಲ್ಲಿಕಾರ್ಜುನ ಸ್ವಾಮಿಗಳಿಂದ ಧ್ವಜಾರೋಹಣ





2012 ಅಕ್ಟೋಬರ್ 28ರಂದು ಲೋಕಾರ್ಪಣೆಗೊಳ್ಳಲಿರುವ 108 ಅಡಿ ಎತ್ತರದ ಬಸವ ಪುತ್ಥಳಿ



REGISTERED KA/BGW/50/2012-2014. RNI No.19980/70. POSTED AT MBC BANGALORE GPO ON 3RD.10TH.20TH OF EVERY MONTH. LICENCED TO POST WITHOUT PREPAMENT WPP-17. PAGES 32+4(COVER PAGES)